# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 167 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 03.01.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 167 • PRGI No:KARKAN/2023/88055 • VIJAYANAGARA • 03.01.2025 • Friday • Page:04 • Rs:2







# ಫೆ.28ರಿಂದ ಮೂರು ದಿನ ಹಂಪಿ ಉತ್ಸವ

## ಆಚರಣೆ ಹಾಗೂ ಉದ್ಘಾಟನೆಗೆ ಸಿಎಂ ಸಿದ್ದರಾಮಯ್ಯ ಸಮ್ಮತಿ | ಕಲಾಸಕ್ತರು, ಕಲಾವಿದರದಲ್ಲಿ ಗರಿಗೆದರಿದ ಉತ್ಸಾಹ





■ ಹಂಪಿ ಟೈಮ್ಸ್ ವಿಜಯನಗರ

ವಿಶ್ವದ ಗಮನ ಸೆಳೆದಿರುವ ಹಂಪಿ ಉತ್ಸವ ಆಚರಣೆಗೆ ಅಂದು, ಇಂದು ಎಂದು ತೂಗಯ್ಯಲೆಯಲ್ಲಿದ್ದ ದಿನಾಂಕ ವನ್ನು ಕೊನೆಗೂ ಸರ್ಕಾರದಿಂದ ನಿರ್ಧರಿಸಲಾಗಿದೆ. ಫೆ.28 ಶುಕ್ರವಾರದಿಂದ ಮಾ.1 ಮತ್ತು ಮಾ.2 ರಂದು ಮೂರು ದಿನ ಹಂಪಿ ಉತ್ಸವ ಆಚರಿಸಲು ಸಿಎಂ ಸಿದ್ದರಾಮಯ್ಯನವರು ಸಮ್ಮತಿ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರು ಗುರುವಾರ ಬೆಳಗ್ಗೆ ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಸಮ್ಮತಿ ಪಡೆದಿದ್ದಾರೆ. ಫೆ. 28 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಂಪಿ ಉತ್ಸವ ಉದ್ಘಾಟನೆ ಮಾಡಲಿದ್ದು, ಮಾರ್ಚ್ 1, 2 ರಂದು ಕಾರ್ಯಕ್ರಮಗಳು ನಡೆಯಲಿವೆ. ಮಾರ್ಚ್ 2 ರಂದು ಸಮಾರೋಪ ನಡೆಯಲಿದೆ. ಹಂಪಿ ಉತ್ಸವ ಕ್ಕೆ ಸಿದ್ಧತೆ ಮಾಡಿಕೊಳ್ಳಲು ಉಸ್ತುವಾರಿ ಸಚಿವ ಜಮೀರ್ ಅಹಮದ್‌ಖಾನ್ ಸೂಚನೆ ನೀಡಿದ್ದಾರೆ. ಈಗಾಗಲೇ ಸಂಬಂಧಿಸಿದ ಅಧಿಕಾರಿಗಳಿಗೂ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. ಹಂಪಿ ಉತ್ಸವ ನವೆಂಬರ್‌ನಲ್ಲೆ ಆಯೋಜಿಸಬೇಕು ಮತ್ತು ಉತ್ಸವಕ್ಕೆ ಅನುದಾನ ನಿಗಧಿಗೊಳಿಸಬೇಕೆಂಬ ಹಂಪಿ ಉತ್ಸವ ಪ್ರಿಯರ ಒತ್ತಾಸೆಗೆ ಈ ಭಾರಿಯ ಉತ್ಸವದಲ್ಲಾದರೂ ಸರ್ಕಾರ ಘೋಷಣೆ ಮಾಡಲಿದೆಯೇ ಎಂಬುದು ಕಾದು ನೋಡಬೇಕಿದೆ.

> ಫೆಬ್ರವರಿ 28 ರಿಂದ ಮೂರು ದಿನ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಪ್ಪಿಗೆ ಸೂಚಿಸಿದ್ದು, ಈ ಬಾರಿಯೂ ಅದ್ದೂರಿ ಹಾಗೂ ಸಂಪ್ರದಾಯವಾಗಿ ಆಚರಿಸಲಾಗುವುದು. ಹಂಪಿ ಉತ್ಸವ ದ ಸಿದ್ಧತೆ ಮಾಡಿಕೊಳ್ಳವಂತೆ ಜಿಲ್ಲಾಧಿಕಾರಿ ಗಳಿಗೆ ನಿರ್ದೇಶನ ನೀಡಲಾಗಿದೆ.
>
> – ಜಮೀರ್ ಅಹಮದ್ ಖಾನ್, ಜಿಲ್ಲಾ ಉಸ್ತುವಾರಿ ಸಚಿವರು



> ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಹಂಪಿ ಉತ್ಸವದ ಆಚರಣೆ ಸಿದ್ಧತೆಗೆ ಸೂಚಿಸಿದ್ದಾರೆ. ನಿರ್ದೇಶನದಂತೆ ಸಿದ್ಧತೆಗೆ ಕಾರ್ಯಚಟುವಟಿಕೆಗಳನ್ನ ಆರಂಭಿಸಲಾಗಿದೆ.
>
> – ಎಂ.ಎಸ್.ದಿವಾಕರ ಜಿಲ್ಲಾಧಿಕಾರಿ,


ಸುದ್ದಿ, ಜಾಹೀರಾತು

ಸುದ್ದಿ, ಜಾಹೀರಾತು, ಜಾಗೃತಿ ಪ್ರಕಟಣೆಗಳಿಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038
Email: hampitimes@gmail.com


## ಮೈಕ್ರೋ ನ್ಯೂಸ್

### ಜ.4 ಮಹನೀಯರ ಜಯಂತಿಗಳ ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತದಿಂದ ಆಚರಿಸುವ ಜನವರಿ ತಿಂಗಳಿನಲ್ಲಿ ನಡೆಯಲಿರುವ ವಿವಿಧ ಜಯಂತಿಗಳ ಪೂರ್ವಭಾವಿ ಸಭೆಗೆ ಭಾಗವಹಿಸುವಂತೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ತಿಳಿಸಿದ್ದಾರೆ. ಮಹನೀಯರಾದ ಜ.14 ರಂದು ಶಿವಯೋಗಿ ಸಿದ್ಧರಾಮ ಜಯಂತಿ, ಜ.19 ರಂದು ಮಹಾಯೋಗಿ ವೇಮನ ಜಯಂತಿ, ಹಾಗೂ ಜ.21 ರಂದು ಅಂಬಿಗರ ಚೌಡಯ್ಯ ಜಯಂತಿ ಆಚರಿಸಲು ಜಿಲ್ಲಾಡಳಿತದಿಂದ ಪೂರ್ವಸಿದ್ಧತೆ ಕೈಗೊಳ್ಳಲು ಪೂರ್ವಭಾವಿ ಸಭೆಗೆ ತಪ್ಪದೇ ಹಾಜರಾಗುವಂತೆ ಸೂಚಿಸಿದ್ದಾರೆ.

### ಜ.03 ರಂದು ಒಂದು ದಿನದ ವಿಶೇಷ ಅತಿಥಿ ಉಪನ್ಯಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜ.3 ರಂದು ಮಧ್ಯಾಹ್ನ 12 ಗಂಟೆಗೆ ವಿದ್ಯಾಲಯದ ಮಂಥನ ಹಾಲ್‌ನಲ್ಲಿ 'ಲಂಡನ್ ಮತ್ತು ಯೂರೋಪನಲ್ಲಿ ಆಯುರ್ವೇದ" ಎಂಬ ವೈದ್ಯಕೀಯ ಶಿಕ್ಷಣದ ಕುರಿತು ಒಂದು ದಿನದ ವಿಶೇಷ ಅತಿಥಿ ಉಪನ್ಯಾಸ ಸಿಎಂಇ ಕಾರ್ಯಕ್ರಮ ಆಯೋಜಿಸಲಾಗಿದೆ.

ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ ಮತ್ತು ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ನಡೆಯಲಿದೆ.

ಯುಕೆ, ಯುರೋಪ್ ಆಯುರ್ವೇದ ಅಕಾಡೆಮಿಯ ಅಧ್ಯಕ್ಷರಾದ ಡಾ. ವೆಂಕಟ್ ಜೋಷಿ ಅವರು ಅತಿಥಿ ಉಪನ್ಯಾಸ ನೀಡುವರು. ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ಮರಿದೇವ ಶರ್ಮ, ನಿವೃತ್ತ ಜಂಟಿ ನಿರ್ದೇಶಕರಾದ ಡಾ.ಎನ್.ಎ.ಮೂರ್ತಿ, ನಿವೃತ್ತ ಪ್ರಾಚಾರ್ಯರಾದ ಡಾ.ಜಿ.ಆರ್.ವಸ್ತ್ರದ್ ಸೇರಿದಂತೆ ಸಿಬ್ಬಂದಿಗಳು ಭಾಗವಹಿಸುವರು.

# ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ

## ಸರ್ಕಾರಿ ಶಾಲೆಗಳ ಮೇಲಿನ ಪೂರ್ವಾಗ್ರಹವನ್ನು ಹೋಗಲಾಡಿಸಿ

## ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಹೇಳಿಕೆ



■ ಹಂಪಿ ಟೈಮ್ಸ್ ಬಳ್ಳಾರಿ

ಮಕ್ಕಳ ಹಕ್ಕುಗಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ಪ್ರತಿಯೊಂದು ಮಗುವಿಗೂ ಶಿಕ್ಷಣ ನೀಡಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕರಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಹೇಳಿದರು.


ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ವಿಶೇಷ ಪೊಲೀಸ್ ಘಟಕ, ಕಾರ್ಮಿಕ ಇಲಾಖೆ, ಶಾಲಾ ಶಿಕ್ಷಣಾ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಆರ್‌ಟಿಇ ಕಾಯ್ದೆಯಡಿ 'ಶಾಲೆಯಲ್ಲಿದೆ ಶಿಕ್ಷಣ ಜೊತೆಗೆ ರಕ್ಷಣೆ' ಮತ್ತು 'ಮಕ್ಕಳೊಂದಿಗೆ ಮುಕ್ತ ಸಂವಾದ ಮತ್ತು ಆಹವಾಲು ಸ್ವೀಕಾರ ಕಾರ್ಯಕ್ರಮ' ಉದ್ಘಾಟಿಸಿ ಮಾತನಾಡಿದರು. ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ, ಪೌಷ್ಠಿಕ ಆಹಾರ ಪಡೆದು ದೇಶದ ಪ್ರಜೆ ಎಂದು ಗುರುತಿಸಿ ಕೊಂಡು ಬದುಕುವ ಹಕ್ಕಿದೆ. ಅದರಂತೆ ಶಿಕ್ಷಣ ಪಡೆದು ವಿಕಾಸ ಹೊಂದುವ ಹಕ್ಕಿದೆ ಎಂದು ಅವರು ತಿಳಿಸಿದರು.

ಉಚಿತ ಮತ್ತು ಕಡ್ಡಾಯ ಶಿಕ್ಷಣ ಪರಿಚ್ಛೇದ '21ಎ' ಅಡಿ ಸಾಂವಿಧಾನಿಕ ಮೂಲಭೂತ ಹಕ್ಕಾಗಿದೆ. ಸರ್ಕಾರಿ ಶಾಲೆಗಳಲ್ಲಿ ಉಚಿತ ಊಟ, ಸಮವಸ್ತ್ರ, ಪೌಷ್ಠಿಕ ಆಹಾರಗಳೊಂದಿಗೆ ಗುಣಮಟ್ಟ ಶಿಕ್ಷಣ ನೀಡಲಾಗುತ್ತಿದೆ. ಪೋಷಕರಲ್ಲಿ ಸರ್ಕಾರಿ ಶಾಲೆಗಳ ಮೇಲಿನ ಪೂರ್ವಾಗ್ರಹವನ್ನು ಹೋಗಲಾಡಿಸಿ ಸರ್ಕಾರಿ ಶಾಲೆಗಳಿಗೆ ಹೆಚ್ಚಿನ ಮಕ್ಕಳು ದಾಖಲಾಗುವಂತೆ ಕ್ರಮವಹಿಸಬೇಕು ಎಂದು ಹೇಳಿದರು.

ಮಕ್ಕಳಿಗೆ ಮನೆ ಹೊರತುಪಡಿಸಿ, ಅತ್ಯಂತ ಸುರಕ್ಷಿತ ಸ್ಥಳ ಎಂದರೆ ಅದು ಶಾಲೆಯಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಸರ್ಕಾರಿ ಶಾಲೆಗಳಿಗೆ ದಾಖಲಾಗುವ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿದ್ದು, ಕಳೆದ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿಯೇ ಸುಮಾರು 60 ಸಾವಿರಕ್ಕೂ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದಿರು ವುದನ್ನು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ವರದಿ ಮಾಡಿದೆ. ರಾಜ್ಯದಲ್ಲಿ 2012 ರಿಂದ 2024 ರವರೆಗೆ 3,800 ಕ್ಕೂ ಹೆಚ್ಚು ಪೋಕ್ಸೋ ಪ್ರಕರಣಗಳು ದಾಖಲಾಗಿವೆ ಎಂದರು.

ಜಿಲ್ಲೆಯ ಪ್ರತಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿ ರಚಿಸಬೇಕು. >>4

## ಆನಂದ ಬಾಣ




# ಕೊಪ್ಪಳ ಅಜ್ಜನ ಜಾತ್ರೆ ಆಹ್ವಾನದ ವೀಡಿಯೋ ಬಿಡುಗಡೆ

■ ಹಂಪಿ ಟೈಮ್ಸ್ ಕೊಪ್ಪಳ

ಜನವರಿ 15, 16 ಹಾಗೂ 17ರಂದು ನಡೆಯುವ ಕೊಪ್ಪಳ ಶ್ರೀ ಗವಿಮಠದ ಅಜ್ಜನ ಮಹಾಜಾತ್ರಾ ಮಹೋತ್ಸವದ ಆಹ್ವಾನದ ವೀಡಿಯೋ ಸಾಂಗ್‌ನ್ನು ಸಫಾಯಿಚಾರಿ ಸಿಬ್ಬಂದಿಯಿಂದ ಗುರುವಾರ ಗವಿಮಠದ ಮುಂಭಾಗದಲ್ಲಿ ಬಿಡುಗಡೆ ಕಾರ್ಯ ನಡೆಯಿತು. ಲಕ್ಷ್ಮಿ, ನಾಗಮ್ಮ, ಬರಮವ್ವ ಶೋಭಾ, ಲಕ್ಷ್ಮವ್ವ, ಈರಮ್ಮ, ಹುಲಿಗೆಮ್ಮ, ನಾಗಮ್ಮ, ಫಕೀರಮ್ಮ, ಗುಂಡಪ್ಪ, ಮಾತಂಗೆವ್ವ, ಶೋಭಾ, ಲಕ್ಷ್ಮವ್ವ, ಈರಮ್ಮ, ಹುಲಿಗೆಮ್ಮ, ನಾಗಮ್ಮ, ಫಕೀರಮ್ಮ, ಗುಂಡಪ್ಪ, ಮಾತಂಗೆವ್ವ ಇವರು ಬಿಡುಗಡೆಗೊಳಿಸಿದರು. https://drive.google.com/file/d/1gW7



3hGsts1jhPuVKwJKU2Z7C9vC2Hdna/view?usp=drivesdk ಲಿಂಕ್ ಮೂಲಕ ವೀಕ್ಷಿಸಬಹುದಾಗಿದೆ.

# ನೊಂದವರ ಮುಖದಲ್ಲಿ ಹರ್ಷ ತಂದ ಜಿಲ್ಲಾಧಿಕಾರಿ

## ಹೊಸಪೇಟೆ ಮುಕ್ತಿ ಆಶ್ರಮದಲ್ಲಿ ಹೊಸ ವರ್ಷ ಆಚರಿಸಿದ ಡಿಸಿ ಎಂ.ಎಸ್.ದಿವಾಕರ

■ ಹಂಪಿ ಟೈಮ್ಸ್ ಹೊಸಪೇಟೆ

ಕ್ಯಾಲೆಂಡರ್ ಹೊಸ ವರ್ಷ ಆಚರಣೆಗೆಂದೇ ದೂರದ ಪ್ರದೇಶಗಳ ಐಶರಾಮಿ ಹೋಟೆಲ್‌ಗಳನ್ನು ಅನೇಕರು ಬುಕ್ ಮಾಡುತ್ತಾರೆ, ಇನ್ನು ಕೆಲವರು ನಿರ್ಜನ ಪ್ರದೇಶಗಳಲ್ಲಿ ತಡರಾತ್ರಿವರೆಗೂ ಕುಡಿದು, ಕುಣಿದು ಕುಪ್ಪಳಿಸುವವರನ್ನು ಸಮಾಜ ನೋಡುತ್ತಿದೆ. ಆದರೆ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಸಮಾಜದಿಂದ ಕಡೆಗಣಿಸಲ್ಪಟ್ಟವರೆಂದೇ ಭಾವಿಸಿರುವ ಹೃದಯವಂತ ಕುಷ್ಠರೋಗಿಗಳ ಮಧ್ಯೆ ಅವರಿಗೆ ಹೂಗುಚ್ಛ ನೀಡಿ, ಅವರಿಂದಲೇ ಕೇಕ್ ಕತ್ತರಿಸಿ, ಸಿಹಿ ಹಂಚಿ ಅರ್ಥಪೂರ್ಣವಾಗಿ ಹೊಸ ಕ್ಯಾಲೆಂಡರ್ 2025 ವರ್ಷವನ್ನು ಸ್ವಾಗಿತಿಸಿರುವುದು ಮಾದರಿಯಾಗಿದ್ದು, ಇಂತಹ ಜಿಲ್ಲಾಧಿಕಾರಿನ್ನು ಪಡೆದ ನಾವೇ ಧನ್ಯರೆಂದು ಕುಷ್ಠರೋಗಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಹೌದು., ಹೊಸಪೇಟೆ ನಗರದ ಮುಕ್ತಿ ಆಶ್ರಮದಲ್ಲಿ ಎರಡು ದಶಕಗಳಿಗೂ ಅಧಿಕ ಕಾಲದಿಂದ ಕುಷ್ಠರೋಗಳಿದ್ದಾರೆ. ಇಲ್ಲಿದ್ದ ಅನೇಕರಿಗೆ ಆರೋಗ್ಯ ಇಲಾಖೆಯು ನಿರಂತರ ಚಿಕಿತ್ಸೆ ನೀಡಿ ಗುಣಪಡಿಸುತ್ತಾ ಬಂದಿದ್ದು, ರೋಗಿಗಳ ಸಂಖ್ಯೆ ಇಳಿಮುಖವಾಗಿದೆ. ಇಲ್ಲಿನ ಕುಷ್ಠರೋಗಿಗಳು ಸ್ವಾಭಿಮಾನಿ ಹಾಗೂ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅಗತ್ಯ ನೆರವನ್ನು ಜಿಲ್ಲಾಡಳಿತ ನೀಡುತ್ತಾ ಬಂದಿದೆ. ವರ್ಷದ ಹಿಂದೆ ನೀಡಿದ ಭರವಸೆಗಳನ್ನು ಜಿಲ್ಲಾಧಿಕಾರಿ ಈಡೇರಿಸಿದ್ದಾರೆ. ಈ ಬಾರಿಯೂ ಇಲ್ಲಿನ ನಿವಾಸಿಗಳು ಕೇಳುವ ಕೆಲ ಸೌಲಭ್ಯಗಳಿಗೂ ಭರವಸೆ ನೀಡಿ, ಅಧಿಕಾರಿಗಳಿಗೆ ಸೌಲಭ್ಯ ಕಲ್ಪಿಸಲು ಸೂಚಿಸಿದರು.

ಜಿಲ್ಲಾ ನಗರ ಯೋಜನಾಧಿಕಾರಿ ಮನೋಹರ ನಾಗರಾಜ, ನಗರಸಭಾ ಪೌರಾಯುಕ್ತ ಚಂದ್ರಪ್ಪ, ನಗರಸಭೆ ಅಧಿಕಾರಿಗಳು, ಇತರರು ಇದ್ದರು.





# ವಕ್ಫ್ ಹಠಾವೋ ದೇಶ್ ಬಚಾವೋ ಜನಜಾಗೃತಿ

## ನಾಗರೀಕ ಹಿತರಕ್ಷಣಾ ಸಮಿತಿ ಸಂಚಾಲಕ ಎಂ.ಭರತ್ ಹೇಳಿಕೆ

■ ಹಂಪಿ ಟೈಮ್ಸ್ ಕಂಪ್ಲಿ

ವಕ್ಫ್ ಹಠಾವೋ ದೇಶ ಬಚಾವೋ ಜನಜಾಗೃತಿ ಸಮಾವೇಶವನ್ನ, ಪಟ್ಟಣದ ಶಾರದಾ ಶಾಲೆ ಆವರಣದಲ್ಲಿ ಜ.4ರಂದು ಮಧ್ಯಾಹ್ನ 3ಗಂಟೆಗೆ ಹಮ್ಮಿಕೊಂಡಿದೆ ಎಂದು ನಾಗರೀಕ ಹಿತರಕ್ಷಣಾ ಸಮಿತಿ ಸಂಚಾಲಕ ಎಂ.ಭರತ್ ಹೇಳಿದರು.

ಇಲ್ಲಿನ ಅತಿಥಿಗೃಹ ಆವರಣದಲ್ಲಿ ಗುರುವಾರ ನಡೆದ ನಾಗರೀಕ ಹಿತರಕ್ಷಣಾ ಸಮಿತಿ ಸಭೆಯಲ್ಲಿ ಮಾತನಾಡಿ, ಎಮ್ಮಿಗನೂರಿನ ವಾಮ ದೇವ ಶಿವಾಚಾರ್ಯರು, ಕಂಪ್ಲಿ ಕಲ್ಮಠದ ಪ್ರಭುಮಹಾ ಸ್ವಾಮಿಗಳು, ಹಂಪೆ ಮಾತಂಗಪರ್ವತದ ಪೂರ್ಣಾನಂದ ಭಾರತಿಶ್ರೀಗಳ ಸಾನ್ನಿಧ್ಯದಲ್ಲಿ, ಇಲ್ಲಿನ ಉದ್ಭವಮಹಾಗಣಪತಿ ದೇವಸ್ಥಾನದಿಂದ ಪಾದ ಯಾತ್ರೆ ಆರಂಭಗೊಳ್ಳಲಿದೆ. ಪಾದಯಾತ್ರೆಯಲ್ಲಿ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್, ಮಾಜಿ ಶಾಸಕ ರಮೇಶ ಜಾರಕಿಹೊಳಿ, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ, ಕೇಂದ್ರ ಮಾಜಿ ಸಚಿವ ಜಿ.ಎಂ.ಸಿದ್ಧೇಶ್ವರ್, ಮಾಜಿ ಸಂಸದರಾದ ಬಿ.ವಿ.ನಾಯಕ್, ಪ್ರತಾಪ್‌ಸಿಂಹ, ಶಾಸಕರಾದ ಚಂದ್ರಪ್ಪ, ಬಿ.ಪಿ.ಹರೀಶ್, ಎಂ.ಭರತ್, ರವಿಬಿರಾದಾರ್, ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಇತರರು ಪಾಲ್ಗೊಳ್ಳಲಿದ್ದಾರೆ. ಪಾದಯಾತ್ರೆ ಪ್ರಮುಖ ರಸ್ತೆ ಮೂಲಕ ಸಾಗಿ ಶಾರದಾ ಶಾಲೆ ಆವರಣದಲ್ಲಿ ಸಮಾರೋಪಗೊಂಡು ಬಹಿರಂಗ ಸಭೆ ನಡೆಸಲಿದೆ. ವಕ್ಫ್ ಕಾಯಿದೆ ಸಮಸ್ಯೆಗೊಳಗಾದ ರೈತರಿಂದ ಸೂಕ್ತ ದಾಖಲೆಗಳನ್ನು ಜಾಗೃತಿ ಸಭೆಯಲ್ಲಿ ಸಂಗ್ರಹಿಸಿ ಕೇಂದ್ರ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿ ಅಧ್ಯಕ್ಷ ಜಗದಂಬಿಕಾ ಪಾಲ್‌ಗೆ ವರದಿ ಸಲ್ಲಿಸಲಾಗುವುದು. ವಕ್ಫ್ ಸಮಸ್ಯೆ ಗೀಡಾದ ರೈತರು, ನಾಗರೀಕರು ಪಾಲ್ಗೊಳ್ಳುವಂತೆ ಕೋರಿದರು. ಸಭೆಯಲ್ಲಿ ಸಮಿತಿ ಸದಸ್ಯರಾದ ವಾಲ್ಮೀಕಿ ಈರಣ್ಣ, ಎಂ.ಮಂಜುನಾಥ, ಪಿ.ಶಂಭು ಲಿಂಗ, ಹರೀಷ್ ಚಿತ್ರಗಾರ್, ಸಂತೋಷ್ ದಮ್ಮಾಳೆ, ಕೆ.ರೇಣುಕರಾಜ, ಕೆ.ಚಂದ್ರಶೇಖರ್, ಜಿ.ಮನೋಜ್, ವಿಜಯ್ ಸೇರಿ ಇತರರಿದ್ದರು.



## ಸ್ಟುಡೆಂಟ್ ಕಾಲಂ

### ಕುರಿಯಾದ ಹುಲಿ



ಒಂದು ದಟ್ಟವಾದ ಕಾಡು. ಆ ಕಾಡಿನಲ್ಲಿ ಕರಡಿ, ಹುಲಿ, ಸಿಂಹ, ಚಿರತೆ ಹೀಗೆ ಹಲವಾರು ಪ್ರಾಣಿಗಳು ಇದ್ದವು. ಒಂದು ಸೀನ ಎನ್ನುವ ಕುರಿ ಕಾಯುವ ವ್ಯಕ್ತಿ ತಾನು ಸಾಕಿದ ಕುರಿಗಳನ್ನು ಮೇಯಿಸಲು ಆ ಕಾಡಿಗೆ ಹೋದನು. ಕುರಿಗಳು ಮೇಯುತ್ತಾ ಮೇಯುತ್ತಾ ಕಾಡಿನೊಳಗೆ ಹೋದವು.

ಕಾಡಿನೊಳಗೆ ಬಂದ ಕುರಿ ಹಿಂಡನ್ನು ಒಂದು ಗರ್ಭಿಣಿ ಹುಲಿ ನೋಡಿತು. ಆಗ ಹುಲಿ ಹಸಿದಿತ್ತು. ಕುರಿ ಹಿಂಡನ್ನು ನೋಡಿದ ಹುಲಿಯು, ಅದರಲ್ಲಿ ಒಂದು ಕುರಿಯನ್ನು ತಿನ್ನಲು ಬೆನ್ನು ಹತ್ತಿತ್ತು. ಹುಲಿಯನ್ನು ನೋಡಿದ ಕುರಿಗಳೆಲ್ಲಾ ಭಯದಿಂದ ಓಡಿ ಹೋದವು. ಹುಲಿಯು ಒಂದು ಕುರಿಯ ಮೇಲೆ ತನ್ನ ಗಮನವನ್ನು ಕೇಂದ್ರಿಕರಿಸಿ ಅದರ ಮೇಲೆ ಜಿಗಿಯಿತು. ಅದೇ ವೇಳೆ ತಪ್ಪಿಸಿಕೊಳ್ಳಲು ಕುರಿಯೂ ಮುಂದಕ್ಕೆ ಜಿಗಿಯಿತು. ಆಯ ತಪ್ಪಿದ ಹುಲಿಯು ಚೂಪಾದ ಕಲ್ಲಿಗೆ ಬಿದ್ದಿತು. ಹುಲಿ ಕಲ್ಲಿಗೆ ಬಿದ್ದಾಗ ಅದರ ಹೊಟ್ಟೆ ಸೀಳಿತು. ಗರ್ಭಿಣಿ ಹುಲಿಯ ಹೊಟ್ಟೆಯಿಂದ ಮರಿ ಹೊರಬಂದಿತು. ಆದರೆ ಹುಲಿಯು ತನಗೆ ಆದ ಗಾಯದಿಂದ ಸತ್ತು ಹೋಯಿತು. ಸತ್ತ ಹುಲಿಯನ್ನು ಹಾಗೂ ಅದರ ಮರಿಯನ್ನು ಕುರಿಗಳು ಬಂದು ನೋಡಿದವು. ಅವುಗಳಿಗೆ ತುಂಬಾ ದುಃಖವಾಯಿತು. ಹುಲಿಯ ಮರಿಯನ್ನು ಇಲ್ಲಿಯೇ ಬಿಟ್ಟರೆ ಅದು ಸಾಯುತ್ತದೆ ಎಂದು ಕುರಿಗಳು ಆ ಹುಲಿ ಮರಿಯನ್ನು ತಮ್ಮೊಡನೆ ಕರೆದು ಕೊಂಡು ಹೋದವು.

ಮುಂದೆ ಕುರಿಗಳೆಲ್ಲಾ ಹುಲಿ ಮರಿಯನ್ನು ಸಾಕಿ ಬೆಳೆಸಿದವು. ಕುರಿಗಳ ಜೊತೆಗೆ ಬೆಳೆದ ಹುಲಿಯು ಕುರಿಯಂತೆ ಹುಲ್ಲು ತಿನ್ನುತ್ತಿತ್ತು. ಕುರಿಗಳಂತೆ ಕೂಗುತ್ತಿತ್ತು. ಕುರಿಗಳಂತೆ ನಡೆಯುತ್ತಿತ್ತು. ಹುಲಿ ಕುರಿಯಾಗಿತ್ತು.

– ಟಿ. ಯಂಕಜ್ಜ. 9ನೇ ತರಗತಿ.
ಸರ್ಕಾರಿ ಪ್ರೌಢಶಾಲೆ. ಬಸರಕೋಡು. ಹ.ಬೊ.ಹಳ್ಳಿ(ತಾ)

### ಪ್ರೀತಿಯ ವಿದ್ಯಾರ್ಥಿಗಳೇ ನಿವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್ ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು 200 ಪದಗಳಿಗೆ ಮೀರದಂತೆ ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.

ಇ–ಮೇಲ್:hampitimes@gmail.com
M: 94486 33038

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

#### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

**ತವರು ಮನೆ, ಗಂಡನ ಮನೆ ಎರಡೂ ಆಕೆಯವಲ್ಲ ಅಂತಾದಾಗ ಹೆಣ್ಣು ಮಕ್ಕಳು ಕುಸಿಯುತ್ತಾರೆ. ಅಕಸ್ಮಾತ್ ಅವರೇನಾದರೂ ತಂದೆಯ ಮನೆಯ ಆಸ್ತಿಯಲ್ಲಿ ಪಾಲು ಕೇಳಿದರೆ ಮುಗಿದೇ ಹೋಯಿತು. ಆಕೆ ಅವರ ಪಾಲಿನ ಖಳನಾಯಕಿ. ಇನ್ನು ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣ ಎಂಬಂತೆ ಎಲ್ಲಾ ಅಪವಾದಗಳು ಹೆಣ್ಣು ಮಕ್ಕಳ ತಲೆಯ ಮೇಲೆಯೇ. ಮನೆಯ ಯಾವುದೇ ಆಕಸ್ಮಿಕಗಳು, ದುರ್ಘಟನೆಗಳು, ತೊಂದರೆಗಳಿಗೆ ಕಾರಣ ಮನೆಯ ಹೆಣ್ಣು ಮಕ್ಕಳೇ.....**

# ನಾನಾರು.. ಅಸ್ತಿತ್ವದ ಹುಡುಕಾಟದಲ್ಲಿ ಹೆಣ್ಣು

ಬೆಳಗಿನ ಜಾವ ಹಿತ್ತಲ ಬಾಗಿಲಿನಲ್ಲಿ ಗೊಣಗುತ್ತಾ ಬಂದ ಕೆಲಸದಾಕೆ ಯನ್ನು ಏನೆಂದು ಪ್ರಶ್ನಿಸಿದಾಗ ಆಕೆ ಹೇಳಿದ್ದು.... ಮನೆ ಕೆಲಸ ನಾನೇ ಮಾಡಬೇಕು, ಮಕ್ಕಳನ್ನು ನಾನೇ ಜೋಪಾನ ಮಾಡಬೇಕು, ಹಣಕಾಸಿನ ಎಲ್ಲಾ ವ್ಯವಸ್ಥೆಗಳನ್ನು ನಾನೇ ಮಾಡಿಕೊಳ್ಳಬೇಕು, ಗಂಡ ಏನನ್ನು ಮಾಡದ, ನೆವ ಹೇಳಿ ಕೆಲಸ ತಪ್ಪಿಸಿಕೊಳ್ಳುವನು ಎಂದು. ನಕ್ಕು ಆಕೆಗೆ ಸಮಾಧಾನಿಸಿದ ನಾನು ನನ್ನ ಕೆಲಸದಲ್ಲಿ ತೊಡಗಿ ಕೊಂಡೆನಾದರೂ ಮನಸ್ಸು ಹೆಣ್ಣಿನ ಅಸ್ತಿತ್ವದ ಕುರಿತು ಪ್ರಶ್ನಿಸತೊಡಗಿತು.

ಹೆಣ್ಣು ಯಾರು... ಹುಟ್ಟಿದ ಮನೆಯಲ್ಲಿ ತನ್ನ ಜೀವಿತದ ಐದನೇ ಒಂದು ಭಾಗವನ್ನು ತಂದೆ ತಾಯಿಯ ಜೊತೆ ಕಳೆಯುವ, ವಿದ್ಯಾಭ್ಯಾಸ ಪಡೆಯುವ ಹೆಣ್ಣನ್ನು ತಂದೆ ತಾಯಿ ಮತ್ತೊಬ್ಬರ ಮನೆಗೆ ಹೋಗು ವವಳು ಪರಕೀಯಳು ಎಂಬಂತೆಯೇ ಬೆಳೆಸುತ್ತಾರೆ. ಯಾವುದೇ ಸಾಮಾಜಿಕ ಹಿನ್ನೆಲೆಯಲ್ಲಿದ್ದರೂ ಕೂಡ ಪ್ರತಿಯೊಂದು ಮನೆಯ ಲ್ಲಿಯೂ ಕೊಟ್ಟ ಮನೆಗೆ ಹೋಗುವ, ಹೋದ ಮೇಲೆ ಅಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ಬೋಧಿಸುವ ಸಮಾಜದ ಬಹು ದೊಡ್ಡ ವರ್ಗವೇ ಇದೆ. ಇದರ ಅರ್ಥ ಇಷ್ಟೇ, ಹೆಣ್ಣು ಮಕ್ಕಳು ತವರಿಗೆ ಮದುವೆಯಾದ ನಂತರ ಆಗಾಗ ಬಂದು ಹೋಗುವ ಅತಿಥಿಗಳು ಮಾತ್ರ, ಅವರಿಗೆ ತವರು ಮನೆಯಲ್ಲಿ ಯಾವುದೇ ಅಧಿಕಾರ ಇರುವುದಿಲ್ಲ ಎಂದು.

ಇನ್ನು ಗಂಡನ ಮನೆಯಲ್ಲಿ ಹೆಣ್ಣು ಮಕ್ಕಳು ತಮ್ಮ ಜೀವಿತದ ಉಳಿದೆಲ್ಲ ಸಮಯವನ್ನು ಕಳೆಯುತ್ತಾರೆ. ತಂದೆಯ ಮನೆಯಲ್ಲಿ ಆಡಿ ಹಾಡಿ ನಲಿಯುತ್ತ ವಿದ್ಯಾಭ್ಯಾಸ ಮಾಡಿದ ಹೆಣ್ಣು ಮಗಳು ಗಂಡನ ಮನೆಗೆ ಬರುತ್ತಲೇ ಆಕೆಗೆ ಸೊಸೆ ಎಂಬ ಪಟ್ಟಗಟ್ಟಿ ಮನೆಯ ಸಮಸ್ತ ಜವಾಬ್ದಾರಿಯನ್ನು ಕೈಗಿಡಲಾಗುತ್ತದೆ. ಜವಾಬ್ದಾರಿ ಎಂದರೆ ಹಣಕಾಸಿನದಲ್ಲ ....ಮನೆಯ ಸಮಸ್ತ ಸದಸ್ಯರ ಬೇಕು ಬೇಡಗಳನ್ನು ನೋಡಿಕೊಳ್ಳುವ ಅವರಿಗೆ ಕಾಲಕಾಲಕ್ಕೆ ಊಟ–ತಿಂಡಿ, ಬಟ್ಟೆ– ಬರೆ ಹೀಗೆ ಬೇಕಾಗುವ ಎಲ್ಲವನ್ನು ಎಲ್ಲರಿಗೂ ಒದಗಿಸುವ ಕೆಲಸ. ಒಂದು ರೀತಿಯಲ್ಲಿ ಇದು ಥ್ಯಾಂಕಲೆಸ್ ಜಾಬ್.

ಮುಂಜಾನೆ ಎದ್ದಾಗಿನಿಂದ ಹಿಡಿದು ರಾತ್ರಿ ಮಲಗುವವರೆಗೆ ಮೂರು ಹೊತ್ತಿನ ಅಡುಗೆ ತಿಂಡಿ ಚಹಾ ಸರಬರಾಜು ಅದೂ ಅವರು ಕುಳಿತಲ್ಲಿಯೇ. ಮನೆಗೆ ಬರುವ ಹೋಗುವ ಅತಿಥಿಗಳ ತಿಂಡಿ ತೀರ್ಥದ ವ್ಯವಸ್ಥೆ ನೋಡಿಕೊಳ್ಳುವುದು, ಮನೆಯ ಹೆಣ್ಣು ಮಕ್ಕಳು ಬಂದರೆ ಅವರಿಗೆ ಎಲ್ಲ ಉಪಚಾರಗಳನ್ನು ಮಾಡುವುದು ಇದರ ಜೊತೆಗೆ ಆರ್ಥಿಕ ಅನುಕೂಲವಿಲ್ಲದಿದ್ದಲ್ಲಿ ಪಾತ್ರೆ, ಬಟ್ಟೆ ತೊಳೆಯುವ, ಮನೆಯನ್ನು ಓರಣವಾಗಿರಿಸುವ, ಕಸಗುಡಿಸಿ ನೆಲ ಒರೆಸುವ ಕೆಲಸವು ಕೂಡ ಹೆಣ್ಣು ಮಕ್ಕಳದೇ.

ಎಲ್ಲವೂ ನೇರವಾಗಿ ಇದ್ದರೆ ಹೆಣ್ಣು ಮಕ್ಕಳು ಎಲ್ಲ ಕೆಲಸವನ್ನು ಅದೆಷ್ಟೇ ಕಷ್ಟವಾದರೂ ಲೀಲಾ ಜಾಲವಾಗಿ ಪೂರೈಸಿಕೊಂಡು ಹೋಗಿಬಿಡುತ್ತಾರೆ... ಅದು ಅವರ ತಾಕತ್ತು.

ಒಂದೆಡೆ ಏನು ಸರಿಯಾಗಿರದಿದ್ದರೂ ಕೂಡ ಅನಿವಾರ್ಯ ವಾಗಿಯಾದರೂ ಎಲ್ಲವನ್ನು ಸರಿದೂಗಿಸಿಕೊಂಡು ಮನೆ ನಡೆಸುವುದು ಹೆಣ್ಣು ಮಕ್ಕಳೇ ಇದು ಅವರ ಹಿಮ್ಮತ್ತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಇದರ ಜೊತೆಗೆ ಮದುವೆಯಾದ ನಂತರ ಬಸಿರಿನ ಬಯಕೆ, ಬಾಣಂತನ, ಮಕ್ಕಳ ಲಾಲನೆ ಪಾಲನೆ, ಮುಂದೆ ಶಾಲೆ ಕಾಲೇಜುಗಳ ಪ್ರವೇಶ, ಪ್ರತಿದಿನ ಅವರಿಗಾಗಿ ಅಡುಗೆ ಮಾಡಿ ಡಬ್ಬ ಕಟ್ಟುವುದು ಓದಿಸುವುದು, ಮನೆ ಪಾಠ ಮಾಡಿಸುವುದು ಅವರ ಪರೀಕ್ಷೆಗೆ ಅವರಿಗಿಂತ ಮುಂಚೆ ಎದ್ದು ಅವರ ಎಲ್ಲ ಚಟುವಟಿಕೆಗಳಿಗೆ ಕೈಗೂಡು ವುದು ಬೆಳಗಿನ ಜಾವದಲ್ಲಿಯೇ ಎದ್ದು ಅವರಿಗೆ ಬೇಕಾದ



ತಿಂಡಿ ತೀರ್ಥಗಳನ್ನು ಮಾಡಿ ಡಬ್ಬಕ್ಕೆ ಕಟ್ಟಿ ಅವರಿಗೆ ಸ್ನಾನ ಮಾಡಿಸಿ ನೀಟಾಗಿ ಐರನ್ ಮಾಡಿದ ಬಟ್ಟೆಗಳನ್ನು ತೊಡಿಸಿ, ತಲೆ ಬಾಚಿ, ತಿಂಡಿ ತಿನಿಸಿ ಅವರನ್ನು ಸ್ಕೂಲ್ ಬಸ್ಸಿಗೆ ಇಲ್ಲವೇ ಆಟೋಕ್ಕೆ ಕಳುಹಿಸಿ ಬಂದರೆ ಒಂದು ಹಂತದ ಕಾರ್ಯ ಮುಗಿದಂತೆ. ನಂತರ ಕೊಂಚ ಸುಧಾರಿಸಿಕೊಂಡು ತಿಂಡಿ ತಿಂದು ಮನೆಯ ಉಳಿದೆಲ್ಲ ಕೆಲಸಗಳತ್ತ ಗಮನಹರಿಸಿದರೆ ಮಕ್ಕಳು ಬರುವ ಹೊತ್ತಿಗೆ ಮತ್ತೆ ಅದೇ ಕೆಲಸಗಳ ಸರಮಾಲೆ. ಇದರ ಮಧ್ಯ ಪತಿಗೆ ಬೇಕಾಗುವ ಫೈಲ್, ಕರ್ಚಿಫು, ವಾಚ್, ಮೊಬೈಲ್ ಗಳನ್ನು ಅವರಿದ್ದ ಸ್ಥಳಕ್ಕೆ ಅವರಿಗೆ ದೊರಕಿಸಿಕೊಟ್ಟು ಅವರು ತಮ್ಮ ಕೆಲಸದ ಸ್ಥಳಕ್ಕೆ ಹೋಗುವವರೆಗೆ ಅವರ ಹಿಂದೆ ಮುಂದೆ ಸುತ್ತಾಡಿ ಅವರ ಅವಶ್ಯಕತೆಗಳನ್ನು ಪೂರೈಸಬೇಕು. ಅಬ್ಬಾ!! ಕೇವಲ ತಮ್ಮ ವೈಯುಕ್ತಿಕ ಕೆಲಸಗಳನ್ನು ತಾವು ಮಾಡಿಕೊಳ್ಳಲಾಗದ ಗಂಡ ಮಕ್ಕಳು ಕೆಲವೇ ದಿನಗಳಲ್ಲಿಯೇ ತಮ್ಮ ಪತ್ನಿಗೆ, ತಾಯಿಗೆ ಮನೆಯಲ್ಲಿಯೇ ಕುಳಿತು ಏನು ಮಾಡುತ್ತಿರುವೆ?? ಇಷ್ಟು ಕೂಡ ಮಾಡಲಾಗದೆ ನಿನಗೆ?? ಎಂದು ಪ್ರಶ್ನಿಸುವಂಥಾಗುವುದು ಕಾಲದ ವೈಪರೀತ್ಯವೆ ಸರಿ.!! ಕೆಲವರು ಮನೆಯ ಹೆಣ್ಣು ಮಕ್ಕಳನ್ನು ಪುಸಲಾಯಿಸಿ ಕೆಲಸ ಮಾಡಿಸಿದರೆ, ಇನ್ನು ಕೆಲವರು ರೋಪು ಹಾಕಿ ಕೆಲಸ ಮಾಡಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಅವರ ಕೆಲಸವಾದರಾಯಿತು... ಮಾಡುವವರ ಪಾಡು ಅವರಿಗೆ ಗೊತ್ತಿಲ್ಲ... ಗೊತ್ತು ಮಾಡಿಕೊಳ್ಳುವುದೂ ಇಲ್ಲ. ಹೀಗೆ ಗಂಡನ ಮನೆಯಲ್ಲಿ ಜೀವನ ಸವೆಸುವ ಹೆಣ್ಣು ಮಕ್ಕಳು ಮನೆಯ ಜವಾಬ್ದಾರಿಯ ಭಾರದಿಂದ ಕಂಗೆಟ್ಟು, ರೋಸಿ ಹೋಗಿ ಬಿರುಸಿನಿಂದ ಏನನ್ನಾದರೂ ಮಾತನಾಡಿದಾಗ ಅವರಿಗೆ ನಿನಗೆ ಈ ಮನೆಯಲ್ಲಿ ಮಾತನಾಡಲು ಯಾವುದೇ ಹಕ್ಕಿಲ್ಲ, ನೀನು ಬೇರೊಂದು ಮನೆಯಿಂದ ಬಂದವಳು ಎಂಬಂತೆ ಮಾತನಾಡಿ ಬಾಯಿ ಮುಚ್ಚಿಸುತ್ತಾರೆ. ಆಕೆಯ ಅಸ್ತಿತ್ವದ ಬೇರನ್ನೇ ಅಲುಗಾಡಿಸಿ ಬಿಡುತ್ತಾರೆ.

ತವರು ಮನೆ, ಗಂಡನ ಮನೆ ಎರಡೂ ಆಕೆಯವಲ್ಲ ಅಂತಾದಾಗ ಹೆಣ್ಣು ಮಕ್ಕಳು ಕುಸಿಯುತ್ತಾರೆ. ಅಕಸ್ಮಾತ್ ಅವರೇನಾದರೂ ತಂದೆಯ ಮನೆಯ ಆಸ್ತಿಯಲ್ಲಿ ಪಾಲು ಕೇಳಿದರೆ ಮುಗಿದೇ ಹೋಯಿತು. ಆಕೆ ಅವರ ಪಾಲಿನ ಖಳನಾಯಕಿ. ಇನ್ನು ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣ ಎಂಬಂತೆ ಎಲ್ಲಾ ಅಪವಾದಗಳು ಹೆಣ್ಣು ಮಕ್ಕಳ ತಲೆಯ ಮೇಲೆಯೇ. ಮನೆಯ ಯಾವುದೇ ಆಕಸ್ಮಿಕಗಳು, ದುರ್ಘಟನೆಗಳು, ತೊಂದರೆಗಳಿಗೆ ಕಾರಣ ಮನೆಯ ಹೆಣ್ಣು ಮಕ್ಕಳೇ... ಬುದ್ಧಿ ಹೇಳಿ ತಿದ್ದುವುದು, ಸೈರಿಸಿಕೊಂಡು ಹೋಗಲು ಹೇಳುವುದು ಮನೆಯ ಹೆಣ್ಣು ಮಕ್ಕಳಿಗೆ ಮಾತ್ರ.

ಹಾಗಾದರೆ ಹೆಣ್ಣು ಮಕ್ಕಳಿಗೆ ನಿಜವಾಗಿಯೂ ಸ್ವಾತಂತ್ರ್ಯವಿಲ್ಲವೇ?? ಕೆಲವೊಮ್ಮೆ ಖಂಡಿತವಾಗಿಯೂ ಇಲ್ಲ. ಆಕೆಯ ಅನಿಸಿಕೆಗಳನ್ನು ಬಿಡುಬೀಸಾಗಿ ಹೇಳಿಕೊಳ್ಳಲು, ಆಕೆ ಬಯಸಿದ ಬಟ್ಟೆ ಬರೆಗಳನ್ನು ತೊಡಲು ಆಕೆಯ ಇಷ್ಟದ ಜೀವನ ನಡೆಸಲು ನಮ್ಮ ಹಿರಿಯರು ಹಾಕಿಕೊಟ್ಟ ಕೆಲ ಸಂಪ್ರದಾಯಗಳು ಬಿಡುವುದೇ ಇಲ್ಲ. ಇದಕ್ಕೆಲ್ಲ ಕಾರಣ ಏನು??

ಖಂಡಿತವಾಗಿಯೂ ಹೆಣ್ಣು ಮಕ್ಕಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲೆ, ಭಾವನಾತ್ಮಕವಾಗಿ ಕೋಮಲೆ, ಕೆಲಸ ಮಾಡುವಲ್ಲಿ ಮಾತ್ರ ಸಬಲೆ ಎಂದು ಗುರುತಿಸುವ ಈ ಸಮಾಜ ಆಕೆಯನ್ನು ಕೂಡ ಓರ್ವ ವ್ಯಕ್ತಿ ಆಕೆಗೂ ಒಂದು ವ್ಯಕ್ತಿತ್ವವಿದೆ, ಆಕೆಯ ವ್ಯಕ್ತಿತ್ವಕ್ಕೆ ಒಂದು ಘನತೆ ಇದೆ ಎಂಬ ಅರಿವನ್ನು ಹೊಂದಿಲ್ಲದೆ ಇರುವುದು ಅವರ ಜಾಣ ಕುರುಡನ್ನು ಮಾತ್ರವಲ್ಲ, ಕಿವುಡುತನ ಮೂಕತನವನ್ನು ಕೂಡ ಸೂಚಿಸುತ್ತದೆ. ಹೆಣ್ಣು ಸಬಲಳಾದರೆ ಆಕೆಯನ್ನು ದೂಷಿಸಿ ಕೆಲಸ ಮಾಡಿಸಿಕೊಳ್ಳಲಾಗದು.... ಸ್ವಭಾವತಃ ಮೈಗಳ್ಳತನವನ್ನು ಮೈಗೂಡಿಸಿಕೊಂಡಿರುವ ಗಂಡು ಜಾತಿ ಹೆಣ್ಣನ್ನು ಪರಾವಲಂಬಿ ಎಂದು ಹೀಗಳೆಯುತ್ತಲೇ ಆಕೆಯ ಮೇಲೆ ಅವಲಂಬಿತರಾಗಿರುತ್ತಾರೆ.

ಇನ್ನು ಮನೆಯಲ್ಲಿ ವಯಸ್ಸಾದ ಹಿರಿಯರ ಚಾಕರಿ ಮಾಡಲು ಹೆಣ್ಣು ಮಕ್ಕಳೇ ಸರಿ. ಗಂಡಸಾಗಿ ನಾನು ಈ ಕೆಲಸಗಳನ್ನೆಲ್ಲ ಮಾಡಬೇಕೇ ಎಂಬ ಒಣ ಅಹಂಭಾವ ಪುರುಷರನ್ನು ಕಾಡಿದರೆ ಸಮಾಜದ ಮತ್ತು ಸಂಬಂಧಿಗಳ ಭಯಕ್ಕೆ, ಮಾಡಲೇಬೇಕಾದ ಅನಿವಾರ್ಯತೆಗೆ ಹೆಣ್ಣು ಮಕ್ಕಳು ಈಡಾಗುತ್ತಾರೆ.

ಹಾಗಾದರೆ ನಾವು ತಪ್ಪಿರುವುದೆಲ್ಲಿ???

ವೇದಗಳ ಕಾಲದಿಂದ ಅವಲೋಕಿಸುತ್ತಾ ಬಂದರೆ ಹೆಣ್ಣು ಮಕ್ಕಳನ್ನು ಮಧ್ಯಕಾಲದಲ್ಲಿ ಹತ್ತಿಕ್ಕಲಾರಂಭಿಸಿದರು. ಅವರನ್ನು ದುರ್ಬಲರೆಂಬಂತೆ ಬಿಂಬಿಸಿ ಸಾಮಾಜಿಕ ಕಟ್ಟುಪಾಡುಗಳನ್ನು ಅವರ ಮೇಲೆ ಹೇರಿದರು. ಸಂಸಾರದ ಉಳಿವಿಗಾಗಿ, ಸಾಮಾಜಿಕ ಪ್ರಗತಿಗಾಗಿ ಉತ್ತಮ ಸಂಸ್ಕೃತಿಯ ನಿರ್ಮಾಣಕ್ಕಾಗಿ ಹೆಣ್ಣಿನ ತ್ಯಾಗದ ಅವಶ್ಯಕತೆ ಇತ್ತು ನಿಜ ಆದರೆ ಆಕೆಯ ಅಸ್ತಿತ್ವದ ಬೇರನ್ನೇ ಅಲುಗಾಡಿಸಿದಾಗ ಆಕೆ ಹೋಗಬೇಕು ಎಲ್ಲಿಗೆ??

ಇಂತಹ ಸಮಯದಲ್ಲಿ ತಮ್ಮ ಹಕ್ಕಿಗಾಗಿ ಹೋರಾಡಿದವರು ಮಹಿಳಾವಾದಿಗಳೆನಿಸಿದರು, ಮನೆ ಮುರುಕರೆನಿಸಿದರು. ಅವರು ಸಮಾನತೆಯ ಹಕ್ಕಿನ ಮಾತನಾಡಿದಾಗ ಅವರ ಜೊತೆಗಿರುವ ಹೆಣ್ಣು ಮಕ್ಕಳೇ ಅವರನ್ನು ತನ್ನ ಮನೆಯನ್ನೆ ಸರಿ ಮಾಡಿಕೊಳ್ಳಲಾಗದವಳು, ಸಮಾಜ ತಿದ್ದಲು ಹೊರಟಳು ಎಂಬಂತೆ ಆಡಿಕೊಂಡು ನಕ್ಕರು. ಪರಿಣಾಮ ಹೆಣ್ಣು ಮಕ್ಕಳು ತಮ್ಮದೇ ಹೆಣ್ಣು ಮಕ್ಕಳ ಗುಂಪಿನಲ್ಲಿಯೂ ಕೂಡ ಪರಕೀಯ ಪ್ರಜ್ಞೆಯನ್ನು ಅನುಭವಿಸುತ್ತಿದ್ದಾರೆ.

ಹಾಗಾದರೆ ಇದಕ್ಕೆ ಕೊನೆಯಿಲ್ಲವೇ??

ಪ್ರತಿ ಆರಂಭಕ್ಕೂ ಒಂದು ಅಂತ್ಯ ಇದ್ದೇ ಇರುತ್ತದೆ ಅಲ್ಲವೇ? ಹೇಗಿದ್ದರೂ ಮನೆಯ ಮಕ್ಕಳ ಜವಾಬ್ದಾರಿಯನ್ನು ಹೆಣ್ಣು ಮಕ್ಕಳಿಗೆ ವಹಿಸಿದ್ದಾರೆ, ಹುಟ್ಟಿದ ಮಗುವಿನಿಂದ ಹಿಡಿದು ಹರೆಯಕ್ಕೆ ಬರುವ ಮಕ್ಕಳ ತನಕ ಎಲ್ಲಾ ಗಂಡು ಹೆಣ್ಣು ಮಕ್ಕಳು ತಾಯಿಯ ಕೈಯಲ್ಲಿ ಬೆಳೆಯುತ್ತಾರೆ. ಆಗ ತಾಯಿಯು ತನ್ನ ಮಕ್ಕಳಲ್ಲಿ ಗಂಡು ಹೆಣ್ಣೆಂಬ ಬೇಧವೆಣಿಸದೇ ಇಬ್ಬರನ್ನು ಬೆಳೆಸಬೇಕು. ತನ್ನ ಮಗಳಿಗೆ ಗಂಡನ ಮನೆಗೆ ಹೋದರೆ ಹೇಗಿರಬೇಕು ಎಂದು ಕಲಿಸುವ ತಾಯಂದಿರು ತನ್ನ ಮನೆಗೆ ಬರುವ ಪತ್ನಿಯನ್ನು ಹೇಗೆ ಗೌರವಿಸಬೇಕೆಂಬುದನ್ನು ಕೂಡ ತಮ್ಮ ಗಂಡು ಮಕ್ಕಳಿಗೆ ಕಲಿಸಿಕೊಡಬೇಕು. ಗಂಡು ಮಕ್ಕಳಲ್ಲಿ ಸೂಕ್ಷ್ಮ ಸಂವೇದನೆಗಳಿರುತ್ತವೆ ನಿಜ, ಅವುಗಳಿಗೆ ನೀರೆರೆದು ಪೋಷಿಸಬೇಕೆ ಹೊರತು, ಗಂಡಸಾಗಿ ಹೆಣ್ಣಪ್ಪಿ ಯಂತೆ ಇರುವೆ ಎಂದು ಆತನ ಗಂಡಸುತನಕ್ಕೆ ಸವಾಲು ಹಾಕುವಂತೆ ಬೆಳೆಸಬಾರದು.

ನಿಜವಾದ ಗಂಡಸುತನ ಎಂದರೆ ತನ್ನ ಎದುರಿಗಿನ ಹೆಣ್ಣು ಮಕ್ಕಳನ್ನು, ಅವರ ಭಾವನೆಗಳನ್ನು ಗೌರವಿಸುವುದು, ಅವರ ವೈಯುಕ್ತಿ ಕತೆಯನ್ನು ಒಪ್ಪಿಕೊಳ್ಳುವುದು ಅವರ ಬೆಳವಣಿಗೆಗೆ ಸಹಕಾರ ನೀಡದಿದ್ದರೆ ಪರವಾಗಿಲ್ಲ ಕೊಡಲಿ ಕಾವಾಗಬಾರದು. ನಿಜವಾದ ಗಂಡಸುತನ ತನ್ನ ಕೌಟುಂಬಿಕ ಜೀವನ ಪಯಣದಲ್ಲಿ ಜೊತೆಗಿರುವ ತಾಯಿ, ಪತ್ನಿ, ಮಗಳು, ಸೊಸೆ ಮತ್ತು ಮೊಮ್ಮಕ್ಕಳ ಜೊತೆಗೆ ಸೌಹಾರ್ದಯುತ ಸಂಬಂಧವನ್ನು ಹೊಂದಿರುವ ಮತ್ತು ಅವರನ್ನು ಪ್ರೀತಿಸಿ ಗೌರವಿಸುವ ಮಾನಸಿಕತೆಯನ್ನು ಹೊಂದಿರಬೇಕು, ಸಾಮಾಜಿಕವಾಗಿ ತನ್ನ ಜೊತೆ ವ್ಯವಹರಿಸುವ ಎಲ್ಲ ಹೆಣ್ಣು ಮಕ್ಕಳೊಂದಿಗೂ ಗೌರವ, ವಿಶ್ವಾಸ ಸ್ನೇಹ ಭಾವನೆಯನ್ನು ಹೊಂದಿರಬೇಕು.

ಹಾಗಾದರೆ ತಾಯಂದಿರೇ, ನೀವು ಅನುಭವಿಸುತ್ತಿರುವ ಅಸ್ತಿತ್ವರಹಿತತೆಯ ಸಂಕಟವನ್ನು ನಿಮ್ಮ ಮುಂದಿನ ಪೀಳಿಗೆ ಅನುಭವಿಸದಿರುವಂತೆ ನಿಮ್ಮ ಮಕ್ಕಳನ್ನು ಬೆಳೆಸಿ, ಉಳಿಸಿ. ಸಾಮಾಜಿಕವಾಗಿ ಸಮಾನತೆಯ ಹರಿಕಾರರಾಗಿ.

# ಮನುಷ್ಯ ಅಳಿಯಬಹುದು ಮಾನವೀಯತೆ ಅಳಿಯಲಾಗದು!

ನಾವು ದಿನನಿತ್ಯ ಏನು ಯೋಚಿಸುತ್ತೇವೆಯೋ ಅದೇ ಅಗುತ್ತೇವೆ. "ಯದ್ಭಾವಂ ತದ್ಭಾವತಿ" ಒಳ್ಳೆಯದನ್ನು ಅಲೋಚಿಸಿದರೆ ಒಳ್ಳೆಯದು ಕೆಟ್ಟದ್ದನ್ನು ಆಲೋಚಿಸಿದರೆ ಕೆಟ್ಟದ್ದೆ. ನಮ್ಮ ಭಾವನೆಗಳು ಜೀವನದಲ್ಲಿ ಹೇಗಿರುತ್ತವೆಯೋ ಅದೇರೀತಿ ನಮ್ಮ ಬದುಕು ರೂಪುಗೊಳ್ಳುತ್ತದೆ. ಸಕಾರಾತ್ಮಕ ಚಿಂತನೆಗಳು ಉತ್ತಮ ಹಂತಕ್ಕೆ ಕೊಂಡೊಯ್ದರೆ, ನಕಾರಾತ್ಮಕ ಚಿಂನತೆಗಳು ಅನೇಕ ತೊಂದರೆಗಳನ್ನು ಸೃಷ್ಟಿಸುತ್ತವೆ. ಹಿಂದೆ ಹಿರಿಯರು ಮಕ್ಕಳಿಗೆ ಮನೆಯಲ್ಲಿ ನಿತ್ಯ ಆಧ್ಯಾತ್ಮದ ವಿಚಾರಗಳನ್ನು, ಮಹಾತ್ಮರ ವಿಚಾರಗಳನ್ನು ಮತ್ತೆ ಮತ್ತೆ ಹೇಳುತ್ತಿದ್ದರು. ಅದೇರೀತಿ ಮಕ್ಕಳೂ ಸಹ ವಯೋಸಹಜ ಹಿರಿಯರಂತೆ ತಾವೂ ಬೆಳೆದು ದೊಡ್ಡವರಾದಾಗ ತಮ್ಮ ಮಕ್ಕಳಿಗೂ ಹೀಗೆಯೇ ಆಧ್ಯಾತ್ಮದ ಮತ್ತು ಮಹಾತ್ಮರ ಚಿಂತನೆಗಳನ್ನು ಬಿತ್ತುತ್ತಾ ಇದ್ದರು. ಈ ಪರಿಪಾಠ ಕೆಲ ವರ್ಷಗಳ ಕಾಲ ಸರಾಗವಾಗಿ ನಡೆಯಿತು. ಇದರಿಂದ ಮಕ್ಕಳಲ್ಲಿ ಮಾನವೀಯ ಗುಣಗಳು ಮೌಲ್ಯಯುತವಾಗಿ ಮತ್ತು ಸಹಜವಾಗಿ ಬೆಳೆದುಬರುತ್ತಿದ್ದವು.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಆದರೆ ಈಚೆಗೆ ಜಾಗತೀಕರಣದ ತೀವ್ರತೆಯಲ್ಲಿ ಆಧುನಿಕ ಜೀವನಶೈಲಿ ಅನಿವಾರ್ಯವಾಯಿತು. ಕಾರಣ ಕೆಲಸಕಾರ್ಯಗಳ



ಒತ್ತಡವಲ್ಲದೆ ಬೆಲೆ ಏರಿಕೆಯಿಂದ ಹೆಚ್ಚೆಚ್ಚು ದುಡಿಮೆಯ ಹಂಬಲದಲ್ಲಿ ಇಂದು ಯಾರಿಗೂ ಹೇಳುವುದಕ್ಕೂ ಕೇಳುವುದಕ್ಕೂ ಪುರುಸೊತ್ತಿಲ್ಲ. ಇದರಿಂದ ಮಕ್ಕಳೂ ಸಹ ಕೇವಲ ಹೋಂವರ್ಕ, ಪರೀಕ್ಷೆ ಮತ್ತು ಅಂಕಗಳು ಎಂಬುದರ ಕಡೆಗೆ ಹೆಚ್ಚು ಗಮನ ನೀಡುತ್ತಿವೆ. ಇಂದು ಎಲ್ಲಾ ಹಿರಿಯರಿಗೆ ತಮ್ಮ ಮಕ್ಕಳು ಪುಸ್ತಕದ ಹುಳುವಾಗಿರಬೇಕೆ ಹೊರತು ಬೇರೇ ಯಾವುದರ ಕಡೆಗೂ ಗಮನ ಕೊಡಬಾರದೆಂಬ ನಿರ್ಬಂಧ ಹಾಕಿದ್ದಾರೆ. ಓದಿ ಓದಿ ತೇರ್ಗಡೆ ಹೊಂದಿ ದೊಡ್ಡ ದೊಡ್ಡ ಕೆಲಸ ಹಿಡಿಬೇಕು ಕೈತುಂಬ ಸಂಪಾದನೆ ಮಾಡಬೇಕು. ಜೀವನದ ಗುರಿ ಅಂದರೆ ಇದಿಷ್ಟೇ ಎಂಬ ಗಡಿರೇಖೆಗಳನ್ನು ಹಾಕಿದ್ದಾರೆ.

ಹಾಗಾಗಿ ಪರಂಪರೆಯ ಅನುಕರುಣೆ, ಪುನರಾವರ್ತನೆ ಬಹಳಷ್ಟು ಮನೆಗಳಲ್ಲಿ ನಿಂತುಹೋಗಿದೆ. ಇದರಾಚೆಗೆ ಮಹಾತ್ಮರ ಚಿಂತನೆಗಳು, ಆಧ್ಯಾತ್ಮದ ವಿಚಾರಗಳು ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಬೇಕೆಂಬ ಒಂದು ಮಾತನ್ನು ಹೇಳಲಾರರು. ಇದರಿಂದ ಇಂದಿನ ಬಹಳಷ್ಟು ಮಕ್ಕಳಲ್ಲಿ ದಯೆ, ಆತ್ಮೀಯತೆ, ಮಾನವೀಯತೆ, ನೈತಿಕತೆ, ಸಹಾನುಭೂತಿ, ಶಾಂತಿ, ಅನುಕಂಪ, ಅನುರಾಗ, ಸಹಾಯದ ಮನೋಭಾವ, ಗೌರವ–ವಿನಯ, ಪ್ರಾರ್ಥನೆ, ನಂಬಿಕೆಗಳೆಲ್ಲಾ ಮಾಯವಾಗಿವೆ. ಕೇವಲ ಹಣ, ಅಧಿಕಾರವಿದ್ದರೆ ಬೇಕಾದ್ದನ್ನು ಪಡೆಯಬಹುದೆಂಬ ಭ್ರಮೆಯಲ್ಲಿದ್ದಾರೆ. ಇಂದು ಹಣವಿದ್ದರೆ ಎಲ್ಲವೂ ಸಿಗುತ್ತದೆ. ಪ್ರತಿಯೊಂದು ಆರ್ಡರ್ ಮಾಡಿದರೆ ಮನೆಗೆ ಬರುತ್ತದೆ. ಯಾವುದಕ್ಕೂ ಇತರರನ್ನು ಅವಲಂಬಿಸುವ ಪ್ರಶ್ನೆಯೇ ಇಲ್ಲ. ಆದರೆ ಇದರಿಂದ ಮಾನವೀಯ ಸ್ಪಂದನೆ ಸಿಗಲಾರದು. ಇದನ್ನು ಮಾತ್ರ ಬೆಲೆ ಕಟ್ಟಿ ಕೊಂಡುಕೊಳ್ಳಲಾಗದು.

ಸಮಾಜದಲ್ಲಿ ಮಾನವೀಯ ಮೌಲ್ಯಗಳು ಅವಿಭಾಜ್ಯ ಅಂಗಗಳು. ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವದೊಳಗೆ ಅಡಗಿರುವಂಥವು. ಇವು ಜೀವನವನ್ನು ಸಾರ್ಥಕಗೊಳಿಸುವಲ್ಲಿ ಅತ್ಯುತ್ತಮವಾಗಿರುತ್ತವೆ. ಚಿಂತೆಯಿಂದ ಮುಕ್ತಗೊಳಿಸುತ್ತವೆ. ಇಂದಿನ ಮಕ್ಕಳಲ್ಲಿ ಮಾನವೀಯ ಅನುಕಂಪ ಹೊರತೆಗೆಯುವುದು, ಪೋಷಿಸುವುದು ಪ್ರತಿಯೊಬ್ಬ ಕಾಳಜಿಯುಳ್ಳ ಪೋಷಕರ ಜವಬ್ದಾರಿಯಾಗಿದೆ.

ಬಾಲ್ಯದಲ್ಲಿ ಮಕ್ಕಳಿಗೆ ಕೇವಲ ಕ್ರೀಡಾಸಕ್ತಿ, ಯೌವ್ವನದಲ್ಲಿ ಭೋಗಾಸಕ್ತಿಯ ಕಡೆಗೆ ಹೊರಳಿಸಿದರೆ ಮುಂದೆ ವೃದ್ಧಾಪ್ಯದಲ್ಲಿ ಅವರು ಚಿಂತಾಮಗ್ನರಾಗುತ್ತಾರೆ. ಬಾಲ್ಯದಲ್ಲಿ ಸ್ವಲ್ಪಮಟ್ಟಿಗಾದರೂ ಭಗವಂತನಲ್ಲಿ ಭಕ್ತಿ ರೂಢಿಸಬೇಕು. ಯೌವ್ವನದಲ್ಲಿ ವಿಷಯಾ ಕರ್ಷಣೆಗಳ ಮಧ್ಯೆಯೂ ಅದನ್ನು ಮುಂದುವರೆಸಿದರೆ ವೃದ್ಧಾಪ್ಯದಲ್ಲಿ ಚಿಂತಾಮಗ್ನರಾಗಲಾರರು. ಮಾನವೀಯತೆಯೆಂದರೆ ಇತರರಿಗೆ ಸಹಕರಿಸುವುದು, ಆತ್ಮೀಯ ಭಾವನೆ ವ್ಯಕ್ತಪಡಿಸುವುದು, ಸ್ಪಂದಿಸು ವುದು, ಪ್ರೀತಿಯಿಂದ ಮಾತಾಡಿಸುವುದು ಅಷ್ಟೆ. ಹೀಗೆ ಕೊನೆಯ ವರೆಗೂ ಇಂಥ ವಿಷಯಗಳಲ್ಲಿ ಒಬ್ಬರಿಂದೊಬ್ಬರು ಪಾಲನೆ ಪೋಷಣೆ ಮಕ್ಕಳಲ್ಲಿ ಮಾಡಿಕೊಂಡುಬಂದರೆ ಮನುಷ್ಯ ಅಳಿದರೂ ಇತರರ ಮನದಲ್ಲಿ ಮಾನವೀಯ ಮೌಲ್ಯಗಳು ಉಳಿಯುತ್ತವೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಸಾವಿತ್ರಿ ಬಾಯಿಪುಲೆ ಶಿಕ್ಷಣದ ಸೆಲೆ

■ **ಶಿವಣ್ಣ ಬಿ ಶಿಕ್ಷಕರು ಗಾಣಗಟ್ಟೆ ಕೂಡ್ಲಿಗಿ.**

ಅಕ್ಷರದವ್ವ, ಅಕ್ಷರದಾತೆ, ಅಕ್ಷರ ಮಾತೆ ಎಂದು ಸುಪ್ರಸಿದ್ಧಿಯಾಗಿರುವ ಸಾವಿತ್ರಿಬಾಯಿ ಫುಲೆ ಭಾರತದ ಮೊದಲ ಬಳಪ ಹಿಡಿದ ಶಿಕ್ಷಕಿ ಎಂಬ ಹಿರಿಮೆಗೆ ಪಾತ್ರರಾದವರು. ಕೈಯಲ್ಲಿ ಸೌಟು ಹಿಡಿದು ಅಡುಗೆ ಕೋಣೆಯ ನಾಲ್ಕು ಮೂಲೆಗಳಲ್ಲಿ ಬಂದಿಯಾಗಿ ತಲೆಯ ಮೇಲೆ ಸೆರಗನ್ನು ಹೊದ್ದುಕೊಂಡು ಗಂಡಾಳ್ವಿಕೆಗೆ ಗೋಣು ಅಲ್ಲಾಡಿಸಿಕೊಂಡು ಅಸ್ತಿತ್ವವಿಲ್ಲದೆ ಜೀವಿಸುತ್ತಿದ್ದ ಹೆಣ್ಣಿಗೆ ಅಕ್ಷರದ ಜಗತ್ತಿನ ದೃಷ್ಟಿಗೆ ಕಣ್ಣಾದವಳು ಕತ್ತಲ ಬದುಕಿಗೆ ಸಾಕ್ಷರತೆಯ ದೀವಿಗೆಯಾದವರು ತಾಯಿ ಸಾವಿತ್ರಿಬಾಯಿ ಫುಲೆ.

ಜನವರಿ 3 1831 ರಂದು ಮಹಾರಾಷ್ಟ್ರದ ನೈಗಾಂವ್ ನಲ್ಲಿ ಲಕ್ಷ್ಮೀಬಾಯಿ ಮತ್ತು ಕಾಂಡೋಜಿ ನಾವ್ಸೇ ಪಾಟೀಲ್ ಅವರ ಮಗಳಾಗಿ ಜನಿಸಿದರು. ಮಾಲಿ ಎಂಬ ದಲಿತ ಸಮುದಾಯದ ಕಡು ಬಡತನದಲ್ಲಿ ಬೆಳೆದ ಇವರಿಗೆ ಪೋಷಕರಿಂದ ಯಾವುದೇ ಅಕ್ಷರದ ಜ್ಞಾನ ದೊರೆಯಲಿಲ್ಲ ಬದಲಾಗಿ ಅಂದಿನ ಸಾಮಾಜಿಕ ಅನಿಷ್ಟ ಪದ್ಧತಿಗಳಲ್ಲೊಂದಾದ ಬಾಲ್ಯ ವಿವಾಹದ ಕೂಪಕ್ಕೆ ಬಿದ್ದು ಒಂಬತ್ತನೇ ವಯಸ್ಸಿಗೆ ಜ್ಯೋತಿಬಾಫುಲೆ ಎಂಬ ಹದಿಮೂರು ವರ್ಷದ ಬಾಲಕನ ವಿವಾಹವಾಗಿ ಸಂಸಾರದ ನೊಗ ಹೇಗಲೇರಿತು.


ಬಾಲ್ಯದಲ್ಲಿ ಒಮ್ಮೆ ಮನೆಯಲ್ಲಿ ಸಿಕ್ಕ ಇಂಗ್ಲಿಷ್ ಪುಸ್ತಕದ ಪುಟಗಳನ್ನು ತೆರೆದು ನೋಡುತ್ತಿರುವಾಗ ತಂದೆ ಗಮನಿಸಿ ಅವಳಿಂದ ಪುಸ್ತಕವನ್ನು ಕಸಿದುಕೊಂಡು ಬಿಸಾಡಿ ಸುಟ್ಟರು. ಹಾಗೆ ಮಾಡಿದರೆ ಹಿಂದೆ ಕಾರಣವಿದೆ ಕೇವಲ ಉನ್ನತ ವರ್ಗದ ಜನತೆ ಮಾತ್ರ ಓದು ಬರಹ ಮಾಡಬಹುದಿತ್ತು ಕೆಳ ವರ್ಗದವರಿಗೆ ಅದು ಕನಸಾಗಿತ್ತು ಹಾಗಾಗಿ ಹಾಗೆ ಮಾಡಿದ್ದರು. ಆ ಒಂದು ಘಟನೆ ಎಳೆಯ ವಯಸ್ಸಿನ ಸಾವಿತ್ರಿಬಾಯಿ ಫುಲೇ ಅವರ ಮನಸ್ಸಿನಲ್ಲಿ ಒಂದು ದೃಢ ಅಚಲ ಪ್ರತಿಜ್ಞೆ ಕೈಗೊಳ್ಳುವಂತೆ ಮಾಡಿತ್ತು ಅದು ಮತ್ತೆ ಯಾವುದೂ ಅಲ್ಲ ಓದು ಬರಹವನ್ನು ಕಲಿತು ಶಿಕ್ಷಣವಂತರಾಗುವುದು.

ಮದುವೆಯಾದ ಎಳೆ ಹುಡುಗಿಗೆ ಬದುಕು ಕತ್ತಲೆಗೆ ದೂಡಿದಂತಾಗಿತ್ತು. ಭರವಸೆ ಕುಸಿದು ಹೋಗಿತ್ತು.ಕನಸುಗಳು ಕಮರಿ ಹೋಗುವ ಭಯವಿತ್ತು. ಆದರೆ ಇವುಗಳನ್ನೆಲ್ಲ ಸುಳ್ಳು ಮಾಡುವಂತೆ ಜೀವನ ಸಂಗಾತಿಯಾದವರು ಜ್ಯೋತಿಬಾಫುಲೆ. ಅವಳ ಆಸೆಗಳನ್ನ ಅರ್ಥ ಮಾಡಿಕೊಂಡ ಜ್ಯೋತಿ

ಬಾಫುಲೆಯವರು ಮನೆಯಲ್ಲಿ ಓದು ಬರಹದ ಪಾಠವನ್ನು ಕಲಿಸಿ ಸ್ವತಹ ಹೆಂಡತಿಗೆ ಗುರುವಾದರು. ಮನೆಯಲ್ಲಿದ್ದ ತಂದೆ ತಾಯಿಗಳ ವಿರೋಧ ಹಾಗು ಸಾಂಪ್ರದಾಯಿಕತೆಯನ್ನು ಧಿಕ್ಕರಿಸಿ ತನ್ನ ಹೆಂಡತಿಯನ್ನು ಹತ್ತಿರದ ಮಿಶನರಿ ಶಾಲೆಗೆ ಸೇರಿಸಿಯೇ ಬಿಟ್ಟರು. ತಾನೊಂದೇ ಶಿಕ್ಷಣ ಪಡೆಯದೆ ತನ್ನಂತೆ ಮಹಿಳಾ ಮಣಿಗಳಿಗೆ ಶಿಕ್ಷಣ ನೀಡಲು ಶಿಕ್ಷಕಿ ಆಗುವ ಕನಸು ಕಂಡರು.

1847 ರಲ್ಲಿ ಸಾವಿತ್ರಿಬಾಯಿ ಫುಲೆ ಶ್ರೀಮತಿ ಮಿಚಲ್ ಅವರ ನಾರ್ಮಲ್ ಶಾಲೆಯಲ್ಲಿ ಶಿಕ್ಷಕಿಯ ತರಬೇತಿ ಪಡೆದರು. 17ನೇ ವರ್ಷದಲ್ಲಿ ತರಬೇತಿ ಮುಗಿಸಿ ಮಹಾರಾಷ್ಟ್ರದಲ್ಲಿ ತರಬೇತಿಯಾದ ಮೊದಲ ಶಿಕ್ಷಕಿಯಾದರು.

ಮೂಢ ನಂಬಿಕೆಗಳು ಮಾತನಾಡುತ್ತಿದ್ದ ಸಮಾಜದಲ್ಲಿ ಸ್ತ್ರೀಯರ ವೇದನೆಗಳು ಸಾಂಪ್ರದಾಯವಾದಿಗಳ ಕರ್ಣಗಳಿಗೆ ಕೇಳಿಸುತ್ತಲು ಇರಲಿಲ್ಲ ಅರ್ಥವು ಆಗುತ್ತಿರಲಿಲ್ಲ. ಗಂಡ ಸತ್ತ ವಿಧವೆಯು ಚಿತೆಯೇರಿ ಸಾಯಬೇಕಿತ್ತು! ಇಲ್ಲದಿದ್ದರೆ ಮನೆಯೊಳಗೆ ಬಂದಿಯಾಗಿ ತಲೆ ಬೋಳಿಸಿಕೊಂಡು ಬಿಳಿ ಸೀರೆ ಉಟ್ಟು ಅಮಂಗಲೆ ಎಂಬ ಪಟ್ಟ ತೊಟ್ಟು ಬದುಕಿಯು ಸತ್ತಂತೆ ಇರಬೇಕಿತ್ತು. ಬಾಲ್ಯ ವಿವಾಹ, ಜಾತಿ ಪದ್ಧತಿ, ಹೆಣ್ಣು ಮಕ್ಕಳ ಅನಕ್ಷರತೆ ಹೋಗಲಾಡಿಸಲು ಒಂದು ಶಾಲೆ ತೆರೆಯುವ ಯೋಚನೆ ಮಾಡಿದರು.



ಜ್ಯೋತಿಬಾ ಫುಲೆ ಯವರ ಸಹಕಾರದಿಂದ ಒಂದು ಮನೆಯಲ್ಲಿ ಹೆಣ್ಣು ಮಕ್ಕಳಿಗಾಗಿ ಶಾಲೆಯನ್ನು ತೆರೆದು ಬಿಟ್ಟರು. ಇದು ಸಮಾಜದಲ್ಲಿ ಈಗಾಗಲೇ ಬೇರೂರಿದ್ದ ಸಾಂಪ್ರದಾಯ ವಾದಿಗಳ ಕಣ್ಣನ್ನು ಕೆಂಪಗಾಗಿಸಿತು. ಒಮ್ಮೆ ರಸ್ತೆಯಲ್ಲಿ ಹೋಗುತ್ತಿದ್ದ ಫುಲೆಯನ್ನು ತಡೆದು ನೀನು ಮಾಡುತ್ತಿರುವುದು ಏನು ನಮ್ಮ ಧರ್ಮದ ವಿರುದ್ಧವಾಗಿ ನಡೆದುಕೊಳ್ಳುತ್ತಿರುವೆಯೇ? ನಮ್ಮ ವೇದ ಪುರಾಣ ಗ್ರಂಥಗಳು ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದು ನಿಷಿದ್ಧ ಎಂಬುದು ತಿಳಿಯದಿಲ್ಲವೇ ನಿನಗೆ ಎಂದು ಪ್ರಶ್ನಿಸಿದರು? ಅದಕ್ಕೆ ಉತ್ತರಿಸಿದ ಫುಲೆ ನಿಮ್ಮ ಯಾವ ಧರ್ಮ, ವೇದ, ಗ್ರಂಥಗಳಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಬಾರದು ಎಂದು ಉಲ್ಲೇಖವಿದೆ ತೋರಿಸಿ ಎಂದು ಪ್ರಶ್ನಿಸಿದರು? ಅದಕ್ಕೆ ಪ್ರತಿಯಾಗಿ ಅವರನ್ನು ಶಾಲೆಗೆ ಹೋಗುವುದಕ್ಕೆ ಅಡ್ಡಿಪಡಿಸಿದರು.

ದಿನೇ ದಿನೇ ಸಾವಿತ್ರಿ ಬಾಫುಲೆ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವುದು ಮುಂದುವರಿಸಿದಾಗ ಅದನ್ನು ತಡೆಯಲು ಅವರ ಮೇಲೆ ಕಲ್ಲುಗಳನ್ನು ತೂರಿದರು ಅದರಿಂದ ಅವರಿಗೆ ಪೆಟ್ಟಾಗಿ ರಕ್ತ ಚಿಮ್ಮಿತೆ ಹೊರತು ಅವರ ಕಲಿಸುವ ಹಠಕ್ಕೆ ಏನು ಆಗಲಿಲ್ಲ. ಮುಂದುವರೆದು ಪಾಠ ಮಾಡಲು ಹೊರಡುತ್ತಿದ್ದ ಅವರ ಮೇಲೆ ಸೆಗಣಿ ಹಾಗೂ ಕೆಸರನ್ನ ಎರಚುತ್ತಿದ್ದರು ಅದಕ್ಕಾಗಿ ಫುಲೆಯವರು ಮತ್ತೊಂದು ಸೀರೆಯನ್ನ ಜೊತೆಗೆ ಕೊಂಡೊಯ್ಯುತ್ತಿದ್ದರು ಶಾಲೆಗೆಯನ್ನು ತಲುಪಿದ ನಂತರ ಮಡಿಯಾದ ಸೀರೆಯನ್ನು ಬದಲಿಸಿ ಕೊಂಡೊಯ್ದ ಸೀರೆಯನ್ನುಟ್ಟು ನಾರಿಯರ ಅಕ್ಷರ ಕಲಿಸುವ ಕಾಯಕ ಮುಂದುವರಿಸುತ್ತಿದ್ದರು. ಪ್ರಚಾರ ಪಡೆಯುತ್ತಾ ಅವರ ಶಾಲೆಯಲ್ಲಿ ಇಬ್ಬರು ಮೂವರಿಂದ ಆರಂಭವಾದ ಹೆಣ್ಣು ಮಕ್ಕಳ ಶಾಲೆ 150 ಕ್ಕೆ ತಲುಪಿದ್ದು ಮಾತ್ರ ಆ ಕಾಲಕ್ಕೆ ದೊಡ್ಡ ಸಾಧನೆಯಾಗಿತ್ತು.

ಬ್ರಿಟಿಷರು ಅವರ ಕಾರ್ಯಕ್ಕೆ ಮೆಚ್ಚಿ ಮೊದಲ ಭಾರತೀಯ ಲೇಡಿ ಟೀಚರ್ ಎಂಬ ಬಿರುದು ಕೊಟ್ಟರು. ಎಲ್ಲಾ ಇದ್ದು ಸಾಧಿಸುವುದು ಬಹಳ ಸುಲಭ. ಏನು ಇಲ್ಲದೆ ಇದ್ದಾಗ ಝೀರೋದಿಂದ ಹೀರೋ ಆದಾಗ ಸವಾಲಿನ ಸನ್ನಿವೇಶಗಳಿಗೆ ಎದೆ ಕೊಟ್ಟು ಗೆದ್ದಾಗ ಇತಿಹಾಸದ ಪುಟಗಳಲ್ಲಿ ನಮ್ಮ ಹೆಸರು ಚಿರಸ್ಥಾಯಿಯಾಗಿ ಉಳಿಯುತ್ತದೆ ಎಂಬುದಕ್ಕೆ ಇವರ ಸಾಧನೆ ನಮ್ಮೆಲ್ಲರಿಗೆ ಸ್ಫೂರ್ತಿಯಾಗುತ್ತದೆ.

ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯದ ಜೊತೆ ಜೊತೆಯಲಿ ಸಮಾಜದ ಪಿಡುಗುಗಳನ್ನು ತೊಲಗಿಸುವ ಕಾರ್ಯಕ್ಕೆ ಕೈ ಹಾಕಿದರು. ಗಂಡ ಸತ್ತ ವಿಧವೆಯರ ನಿಕೃಷ್ಟ ಸ್ಥಾನಮಾನಗಳನ್ನು ಸುಧಾರಿಸುವ ಪ್ರಯತ್ನ ಮಾಡಿದರು. ಒಮ್ಮೆ ಒಬ್ಬ ಗರ್ಭಿಣಿ ವಿಧವೆ ಸಮಾಜಕ್ಕೆ ಹೆದರಿ ಬಾವಿಗೆ ಹಾರಲು ಹೊರಟಾಗ ತಡೆದು ಅವಳನ್ನು ಆರೈಕೆ ಮಾಡಿ ಅವಳ ಮಗನನ್ನ ದತ್ತು ಪಡೆದು ಸಾಕಿ, ಓದಿಸಿ ವಿದ್ಯಾವಂತನನ್ನಾಗಿ ಮಾಡಿ ವೈದ್ಯನನ್ನಾಗಿಸಿ,ತನ್ನ ಮಗನಿಗೆ ವಿಧವೆಯನ್ನು ಮದುವೆ ಮಾಡಿದರು.

18ನೇ ಶತಮಾನದಲ್ಲಿ ಮೌಢ್ಯಗಳ ಹೊಡೆತ ಒಂದು ಕಡೆಯಾದರೆ, ಮತ್ತೊಂದು ಕಡೆ ಪ್ಲೇಗ್ ಎಂಬ ಮಹಾಮಾರಿ ಒಬ್ಬರಿಂದ ಒಬ್ಬರಿಗೆ ಹರಡುತ್ತಾ ಉಸಿರನ್ನು ಕಸಿಯುತ್ತಿತ್ತು.

ಪ್ಲೇಗ್ ಬಂದ ಕುಟುಂಬದ ಸದಸ್ಯರನ್ನು ಮತ್ತೊಬ್ಬರು ಪೋಷಿಸಲು ಭಯ ಪಡುತ್ತಿದ್ದ ಸನ್ನಿವೇಶದಲ್ಲಿ ಸಾವನ್ನು ಲೆಕ್ಕಿಸದೆ ತನ್ನ ಮಗನಾದ ವೈದ್ಯ ಯಶವಂತ್ ಸಹಕಾರ ಪಡೆದು ಬಡ ಜನರ ಜೀವವನ್ನು ಉಳಿಸಿ ಅವರ ಪಾಲಿನ ದೇವರಾದವರೂ. ಹಾಗಾಗಿ ಬಹುಶಃ ಭಾರತದ ಮದರ್ ತೆರೇಸಾ ಎಂದು ಫುಲೆಯನ್ನು ಕರೆದರೆ ತಪ್ಪಾಗಲಾರದು!

ಜ್ಯೋತಿ ಬಾಫುಲೆಯವರ ಕಾರ್ಯಕ್ಕೆ ಹೆಗಲಾಗಿ ಜಾತಿ ಪದ್ಧತಿಯನ್ನ ಪುಡಿ ಗೊಟ್ಟಿದರು, ಸತಿ ಸಹಗಮನ ಪದ್ಧತಿಯನ್ನು ವಿರೋಧಿಸಿದರು, ಬಾಲ್ಯ ವಿವಾಹಕ್ಕೆ ತಿಲಾಂಜಲಿ ಇಡಲು ಪಣತೊಟ್ಟರು, ನೊಂದ ಹೆಣ್ಣು ಮಕ್ಕಳ ಸಾಮಾಜಿಕ ಸ್ಥಾನಗಳನ್ನು ಉತ್ತಮಪಡಿಸಲು ಜೀವನವನ್ನು ಮುಡುಪಾಗಿಸಿದರು. ಅಂಧಕಾರಗಳನ್ನ ವಿರೋಧಿಸಲು ಅಕ್ಷರದ ಅರಿವು ಮೂಡಿಸಿ ಹೆಂಗಳೆಯರನ್ನು ಸಾಕ್ಷರನನ್ನಾಗಿಸಲು ಹಗಲಿರಳು ಶ್ರಮಿಸಿದರು.

18ನೇ ಶತಮಾನದಲ್ಲಿ ಜ್ಯೋತಿಬಾಫುಲೆ ಎಂಬ ಜ್ಞಾನದ ಕಿಡಿ ಹೊತ್ತಿಲ್ಲದಿದ್ದರೆ ಮಹಿಳೆಯರು ಸಮಾಜದ ಅಂಧಕಾರದ ಹೊಳೆಯಲ್ಲಿ, ಮೌಢ್ಯಗಳ ಮೊಡುವಲ್ಲಿ, ಗಂಡಾಳ್ವಿಕೆಯ ಪಾಶದಲ್ಲಿ ವಶವಾಗಿ, ಅಸ್ತಿತ್ವವಿಲ್ಲದೆ ಪ್ರಶ್ನಿಸುವ ಗುಣವು ಸತ್ತು ಪ್ರಾಣಿಗಳಂತೆ ಬದುಕಬೇಕಾಗಿತ್ತು!

ಹೆಣ್ಣು ಮತ್ತು ಗಂಡುಗಳ ಸಮಾನತೆ ಇದ್ದಾಗ ಮಾತ್ರ ಸಮಾಜ ಮತ್ತು ದೇಶ ಅಭಿವೃದ್ಧಿಯಾಗಬಲ್ಲದು ಸ್ವತಂತ್ರ ನಂತರ ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ವ್ಯತ್ಯಾಸ ಸಾಗುತ್ತಾ ಬರುತ್ತಿದೆ 2011ರ ಸಾಕ್ಷರತೆಯನ್ನು ಗಮನಿಸಿದಾಗ ಪುರುಷರ ಸಾಕ್ಷರತೆ 82 ಮಹಿಳೆಯರ ಸಾಕ್ಷರತೆ 65. ಇರುವುದು ಇದಕ್ಕೆ ಪುಷ್ಟಿ ನೀಡುತ್ತದೆ. ಅಷ್ಟೇ ಅಲ್ಲದೆ ಇನ್ನು ನಮ್ಮ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಬಗ್ಗೆ ಕೀಳಿರಿಮೆ ಕಡಿಮೆಯಾಗಿಲ್ಲ. ವಯಸ್ಸಿಗೆ ಬಂದ ಹೆಣ್ಣು ಮಕ್ಕಳನ್ನು ಬೇಗ ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವ ಜರೂರು ಪೋಷಕರಲ್ಲಿದೆ. ಇದಕ್ಕೆ ಪುಷ್ಟಿ ನೀಡುವಂತೆ ನಮ್ಮ ರಾಜ್ಯವು ಬಾಲ್ಯ ವಿವಾಹದಲ್ಲಿ ತಮಿಳುನಾಡಿನ ನಂತರ ಎರಡನೇ ಸ್ಥಾನದಲ್ಲಿದೆ.

ಶಿಕ್ಷಣ ಪಡೆದು ಉತ್ತಮ ಉದ್ಯೋಗದಲ್ಲಿರುವ ಹೆಣ್ಣುಮಕ್ಕಳು ಆಧುನಿಕ ಜಗತ್ತಿನಲ್ಲಿ ಅತ್ಯಾಚಾರ, ಮಾನಸಿಕ ಹಿಂಸೆ, ದೈಹಿಕ ದಾಳಿ, ಮುಂತಾದವುಗಳು ಆಧುನಿಕ ಸಮಾಜದ ಕ್ರೂರತ್ವವನ್ನು ಎತ್ತಿ ತೋರಿಸುತ್ತಿವೆ!

ಅಂದು ಆರಂಭಿಸಿದ ಸಾವಿತ್ರಿಬಾಯಿ ಫುಲೆ ಅವರ ಕಾರ್ಯ ಪೂರ್ಣವಾಗಿಲ್ಲ. ಹಾಗಾಗಿ ಸರ್ಕಾರಗಳು ಈ ಕುರಿತು ಗಮನವಹಿಸಬೇಕು ಈಗಾಗಲೇ ಗ್ರಾಮ ಮಟ್ಟದಲ್ಲಿ ಅನೇಕ ಮಹಿಳೆಯರು ಮೀಸಲಾತಿ ಲಾಭ ಪಡೆದು ಸದಸ್ಯರೂ, ಅಧ್ಯಕ್ಷರಾಗಿದ್ದಾರೆ, ಇತ್ತೀಚಿಗೆ ಕೇಂದ್ರ ಸರ್ಕಾರದ ನಾರಿವಂದನ ಮಸೂದೆಯು ಪಾಸಾಗಿದೆ ಅದು ಜಾರಿಯಾದರೆ ಮಹಿಳೆಯರು ಮತ್ತಷ್ಟು ಉನ್ನತ ಹುದ್ದೆಗೆ ಏರಿ ಅವರ ಸ್ಥಾನಮಾನಗಳಲ್ಲಿ ಮತ್ತಷ್ಟು ಸುಧಾರಣೆಯಾಗಬಲ್ಲದು ಎಂಬ ಆಶಯವಿದೆ.


ಒಬ್ಬ ದಾರ್ಶನಿಕರು ಹೀಗೆ ನುಡಿಯುತ್ತಾರೆ "ಯಾವುದೇ ದೇಶದ ಪ್ರಗತಿಯನ್ನು ನಾನು ಆ ದೇಶದಲ್ಲಿರುವ ಮಹಿಳೆಯರ ಸ್ಥಿತಿಗತಿಗಳ ಆಧಾರದದಿಂದ ನಾನು ಅಳೆಯುತ್ತೇನೆ". ಎಂಬು ಮಾತು ಮಹಿಳೆಯರ ಸಬಲೀಕರಣಕ್ಕೆ ಎಷ್ಟು ಮಹತ್ವವಿದೆ ಎಂದು ಸಾರುತ್ತದೆ.


21ನೇ ಶತಮಾನದ ಹೊತ್ತಿನಲ್ಲಿದ್ದೇವೆ ಆಡಳಿತ, ರಾಜಕೀಯದ ಅಧಿಕಾರದಲ್ಲಿ ಕೆಲವೊಂದಿಷ್ಟು ಮಹಿಳೆಯರು ಇರುವುದಾದರೂ ಅವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಇದು ಸಾಧಿತವಾಗಬೇಕಾದರೆ ನಮ್ಮ ಮನದಾಳದಲ್ಲಿರುವ ಸ್ತ್ರೀಯ ಕುರಿತ ಕೀಳಿರುಮೆ, ಅಪನಂಬಿಕೆ ಕಡಿಮೆಯಾಗಬೇಕು ಅವರಿಗೂ ಅವಕಾಶಗಳನ್ನು ನೀಡಬೇಕು ಮಗಳು ಮತ್ತು ಮಗನನ್ನು ಒಂದೇ ತಕ್ಕಡಿಯಲ್ಲಿ ತೂಗಬೇಕು.ಈ ಕೆಲಸ ಕುಟುಂಬದಿಂದಲೇ ಆರಂಭಗೊಳ್ಳಬೇಕು ಈಗಾಗಲೇ ಕೆಲವರು ಶುರು ಮಾಡಿದ್ದಾರೆ ಎಲ್ಲರೂ ಕೈಜೋಡಿಸಬೇಕಿದೆ. ಇದು ಸಾಕಾರವಾದಾಗ ಮಾತ್ರ ಸಮಾಜದಲ್ಲಿ ಮಹಿಳೆಯರು ಸಬಲರಾಗಬಲ್ಲರು ಜೊತೆಗೆ ಸಾವಿತ್ರಿ ಬಾಫುಲೆಯ ಕನಸು ಈಡೇರಬಲ್ಲದು ಏನಂತೀರಾ?


# ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ–5 ಫಲಿತಾಂಶ

■ **ಹಂಪಿ ಟೈಮ್ಸ್ ಹೊಸಪೇಟೆ**

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಫಲಿತಾಂಶ ಪ್ರಗತಿಗಾಗಿ ಹಂಪಿ ಟೈಮ್ಸ್‌ನಿಂದ ಪ್ರತಿ ಶುಕ್ರವಾರ ನಡೆಯುವ ವಿಜ್ಞಾನ ಚಿತ್ರಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಮೂವರು ಅತ್ಯುತ್ತಮ ಚಿತ್ರಗಳನ್ನು ಬಿಡಿಸಿ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದಿರುವ ವಿದ್ಯಾರ್ಥಿಗಳಿಗೆ ಅಭಿನಂದನೆ ಗಳು. ಮಾಜಿ ಪ್ರಧಾನಿ ಡಾ.ಮನಮೋಹನ ಸಿಂಗ್ ನಿಧನದ ನಿಮಿತ್ತ ಶುಕ್ರವಾರ ಶಾಲೆಗಳಿಗೂ ರಜೆ ಇದ್ದುದರಿಂದ ವಿದ್ಯಾರ್ಥಿ ಗಳು ಶನಿವಾರ ಶಾಲೆಗಳಲ್ಲಿ ಚಿತ್ರಬಿಡಿಸಿರುವುದು ಮಕ್ಕಳಲ್ಲಿ ಹೆಚ್ಚಿದ ಕಲಿಕಾಸಕ್ತಿಗೆ ಕೈಗನ್ನಡಿ ಯಂತಿದೆ. ವಾರ್ಷಿಕ ಪರೀಕ್ಷೆಗೆ ಈಗಿನಿಂದಲೇ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಉತ್ತಮ ವೇದಿಕೆ ಕಲ್ಪಿಸಿದೆ ಎಂದು ವಿದ್ಯಾರ್ಥಿಗಳು, ಶಿಕ್ಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.










**ಪ್ರಥಮ ಸ್ಥಾನ : ಕೆ.ಸಂತೋಷ**
ಸರ್ಕಾರಿ ಪ್ರೌಢಶಾಲೆ, ಅನಂತಶಯನ ಗುಡಿ ಹೊಸಪೇಟೆ.



**ದ್ವಿತೀಯ ಸ್ಥಾನ : ಬಿ.ಲಕ್ಷ್ಮಿ**
ಶ್ರೀ.ಉ.ಜ.ಸಿ. ಪ್ರೌಢಶಾಲೆ, ಸಂಡೂರು



**ತೃತೀಯ ಸ್ಥಾನ: ಜಿ. ರೇಖಾ**
ಎಲ್.ಎಚ್.ಎಸ್ ಪ್ರೌಢಶಾಲೆ, ಹಂಪಸಾಗರ

### ಹಗರಿಬೊಮ್ಮನಹಳ್ಳಿ ತಾಲೂಕು

**1. ಎಸ್.ಎ ಚೈತ್ರ**
ಸರ್ಕಾರಿ ಪ್ರೌಢಶಾಲೆ, ಗದ್ದಿಕೇರಿ
ಶಿಕ್ಷಕರು–ರವಿಚಂದ್ರ ನಾಯ್ಕ ಎಲ್

**2. ಅಕ್ಷತ ಕೆ.ವಿ**
ಕೌದಿ ಮಹಾಂತೇಶ್ವರ ಪ್ರೌಢಶಾಲೆ, ಬಾಚಿಗೊಂಡನಹಳ್ಳಿ
ಶಿಕ್ಷಕರು–ವಿ ಪ್ರಕಾಶಪ್ಪ

**3. ಬಿ.ಅನಿಲ**
ಶ್ರೀ ಗುರುಬಸವೇಶ್ವರ ಪ್ರೌಢಶಾಲೆ, ಬೆಣಕಲ್ಲು
ಶಿಕ್ಷಕರು–ಶಿವತನಯ ಎಸ್.ಸಿ

**4. ಸಹನ ಆರ್**
ರಾಷ್ಟ್ರೋತ್ಥಾನ ಪ್ರೌಢಶಾಲೆ, ಹ.ಬೊ. ಹಳ್ಳಿ
ಶಿಕ್ಷಕರು–ಎಲ್. ವೆಂಕಟೇಶ್

**5. ಎಸ್. ಲಕ್ಷ್ಮಿ**
ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ, ಹಂಪಾಪಟ್ಟಣ
ಶಿಕ್ಷಕರ ಹೆಸರು–ರಾಘವೇಂದ್ರ ಪಿ

**6. ಎಸ್. ಸಾವಿತ್ರಿ**
ಉಉಊಖ, ವಲ್ಲಭಾಪುರ
ಶಿಕ್ಷಕರು– ಶಾಹಿದ್ ಬಾಷ .ಎನ್

**7. ಜಿ. ರೇಖಾ**
ಎಲ್.ಎಚ್.ಎಸ್ ಪ್ರೌಢಶಾಲೆ, ಹಂಪಸಾಗರ
ಶಿಕ್ಷಕರು–ವಿಜಯಕುಮಾರ ಬೇಂದ್ರೆ

### ಹೊಸಪೇಟೆ ತಾಲೂಕು

**1. ಕೆ. ಸಂತೋಷ**
ಸರ್ಕಾರಿ ಪ್ರೌಢಶಾಲೆ,ಅನಂತಶಯನ ಗುಡಿ
ಶಿಕ್ಷಕಿಯ ಹೆಸರು– ಜೆ.ಗಂಗಮ್ಮ

**2. ಎಸ್. ಇಶ್ರತ್**
ಸ.ಸಂ.ಪ.ಪೂ.ಕಾಲೇಜು ಚಿತ್ತವಾಡಗಿ ಹೊಸಪೇಟೆ
ಶಿಕ್ಷಕರು–ಎ ಎಂ ವರಲಕ್ಷ್ಮಿ

**3. ಲತಾ**
ಸರ್ಕಾರಿ ಪ್ರೌಢಶಾಲೆ, ಬುಕ್ಕಸಾಗರ
ಶಿಕ್ಷಕರು– ಮಹಮ್ಮದ್ ಮನ್ಸೂರ್ ಅಲಿ

**4. ಪ್ರಶಾಂತ**
ಸರ್ಕಾರಿ ಪ್ರೌಢಶಾಲೆ, ಗುಂಡ
ಶಿಕ್ಷಕರು–ನಾರಾಯಣ ಕೆ

### ಕೊಟ್ಟೂರು ತಾಲೂಕು

**1. ಡಿ. ಸ್ಪಂದನ**
ಕೆ.ಪಿ.ಎಸ್ ಶಾಲೆ, ಕೋಗಳಿ
ಶಿಕ್ಷಕರು–ಶಶಿಕಲ

### ಕೂಡ್ಲಿಗಿ ತಾಲೂಕು

**1. ಸಂಧ್ಯಾ ಎಂ.ಜಿ**
ಶರಣಬಸವೇಶ್ವರ ಪ್ರೌಢಶಾಲೆ, ಕಾನಾಮಡುಗು
ಶಿಕ್ಷಕರು– ವಾಣಿ

### ಹರಪನಹಳ್ಳಿ ತಾಲೂಕು

**1. ಬಿ.ಎಸ್ ಮನು**
ಸರ್ಕಾರಿ ಪ್ರೌಢಶಾಲೆ, ಕಡಬಗೆರೆ
ಶಿಕ್ಷಕರು– ಸೋಮಪ್ಪ ನಿಲುಗೋಳ್

**2. ವಿ.ಎಂ ಚಂದನ**
ಸರ್ಕಾರಿ ಪ್ರೌಢಶಾಲೆ, ಹಗರಿಗಜಾಪುರ
ಶಿಕ್ಷಕರು– ಲಲಿತಾ ಮಾಮನಿ

### ಹಡಗಲಿ ತಾಲೂಕು

**1. ಲಂಬಾಣಿ ಲೋಕೇಶ**
ವಿ.ಕೆ.ಕೆ ಕರ್ನಾಟಕ ಪಬ್ಲಿಕ್ ಶಾಲೆ ಹಿರೇಹಡಗಲಿ
ಶಿಕ್ಷಕರು– ಪಾಂಡುನಾಯ್ಕ & ಕವಿತಾ

### ಬಳ್ಳಾರಿ ಜಿಲ್ಲೆ

**1. ಬಿ.ಅಮಲ**
ಸರ್ಕಾರಿ ಪ್ರೌಢಶಾಲೆ, ಇಂದಿರಾನಗರ ಬಳ್ಳಾರಿ
ಶಿಕ್ಷಕರು– ಷಾಹಿನಾ

### ಸಂಡೂರು ತಾಲೂಕು

**1. ಬಿ. ಲಕ್ಷ್ಮಿ**
ಶ್ರೀ.ಉ.ಜ.ಸಿ.ಪ್ರೌಢಶಾಲೆ, ಸಂಡೂರು
ಶಿಕ್ಷಕರು– ಸುಧಾ ಎಸ್.ಎಂ

ಈ ಬಾರಿ ಫಲಿತಾಂಶ ನಮ್ಮದೇ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ–6
ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...
ವಿಷಯ: ಲೋಹದ ಮೇಲೆ ಹಬೆಯ ವರ್ತನೆಯನ್ನು ತೋರಿಸುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ ?
ಸೂಚನೆ: ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.
ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.
ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸುವ ವಾಟ್ಸ್‌ಪ್ ನಂ: 99726 03099
ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸುವ ವಾಟ್ಸ್‌ಪ್ ನಂ: 94486 33038



- Admissions
- Requirements
- Firm Branding
- Public Notice
- Change of Name


BOOK NOW!

Book Your Advertisements in Leading Local HAMPI TIMES Print & Digital News Paper

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hospete-583201 Vijayanagara Dist.

## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 02–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1626.09 ಅಡಿ |
| ಒಳ ಹರಿವು | 110 ಕ್ಯುಸೆಕ್ |
| ಹೊರ ಹರಿವು | 8844 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 80.105 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1589.07 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.270 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

03–01–2025 – ಶುಕ್ರವಾರ

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಧನಿಷ್ಠ |
| ಯೋಗ | : ವಜ್ರ |
| ಕರಣ | : ವಾಣಿಜ |
| ಸೂರ್ಯೋದಯ | : 07:10:09 |
| ಸೂರ್ಯಾಸ್ತ | : 17:53:00 |
| ರಾಹು ಕಾಲ | : 11:11–12:32 |
| ಯಮಘಂಡ ಕಾಲ | : 15:12–16:33 |
| ಗುಳಿಕ ಕಾಲ | : 08:31–09:51 |


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us


## ಕವಿ ಮನಸು

### ಕಾದು ನೋಡಾ

ಎಷ್ಟು ದಿನ ನಾನಿರುವೆ
ಎಂಬುದು ಅ –ಮುಖ್ಯ
ಎಂತಿರುವೆ.. ಎಂತಿದ್ದೆ
ಎಂಬುದೇ ಪ್ರಾಮುಖ್ಯ..

ನಾಮವುಳಿದಾಗಿಹುದು
ನಿರ್ನಾಮ ಬರಿ ಸುಳ್ಳು
ಈ ಮಾತು ಎಂದೆಂದು ಪೂರ್ತಿ ಜೊಳ್ಳು....

ಆನೆ ಪಳಗಿಸಿದಂತ
ಮಾವುತಗು ಭಯವುಂಟು
ಎಂದೆನ್ನ ತುಳಿವುದೆಂಬ ಸುಳಿವು ಸಿಕ್ಕು....

ಹೀಯಾಳಿಕೆ ಮಾತು
ಬೇಡವೋ ಬೇಡ
ಕೈ ಕುಲುಕಿ ಎಲ್ಲವಾ ಶಾಂತದಿ ನೋಡಾ.....


ಕದಡಿದ ಜಲವು ತಾನ್
ತಿಳಿಗೊಳುವತನಕ
ಶಾಂತ ಚಿತ್ತದ ಮನದಿ ಕಾದು ನೋಡಾ....

– ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಗೆದ್ದಲಗಟ್ಟೆ


For Events Coverage
Contact
94486 33038


# ಹೊಸಪೇಟೆ ರೈಲು ನಿಲ್ದಾಣ ಮೇಲ್ದರ್ಜೆಗೆ ಕ್ರಮ: ಅರವಿಂದ

### ಬಾಬುಲಾಲ್ ಜೈನ್ ನೇತೃತ್ವದಲ್ಲಿ ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ನಿಯೋಗದಿಂದ ಮನವಿ



■ **ಹಂಪಿ ಟೈಮ್ಸ್ ಹೊಸಪೇಟೆ**

ನೈರುತ್ಯ ರೈಲ್ವೇ ವಲಯ ಬಳಕೆದಾರರ ಸಲಹಾ ಸಮಿತಿ ಹಿರಿಯ ಸದಸ್ಯ ಬಾಬುಲಾಲ್ ಜೈನ್ ಅವರ ನೇತೃತ್ವದಲ್ಲಿ ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ನಿಯೋಗವು ಗುರುವಾರ ನಗರದ ನಿಲ್ದಾಣದಲ್ಲಿ ನೈರುತ್ಯ ರೈಲ್ವೇ ವಲಯ ಪ್ರಧಾನ ವ್ಯವಸ್ಥಾಪಕರಾದ ಅರವಿಂದ ಶ್ರೀವಾತ್ಸವ್ ಅವರನ್ನು ಭೇಟಿ ಮಾಡಿ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಾಬುಲಾಲ್ ಜೈನ್ ಮಾತನಾಡಿ, ಹೊಸಪೇಟೆ ಯಿಂದ ಕೊಟ್ಟೂರು ಮಾರ್ಗವಾಗಿ ಬಂದರು ನಗರ ಮಂಗಳೂರಿಗೆ ನೂತನ ರೈಲು ಆರಂಭಿಸುವ ಅಗತ್ಯವಿದೆ. ಇದರಿಂದ ವಿಶ್ವಪಾರಂಪರಿಕ ತಾಣವಾದ ಹಂಪಿ ಹಾಗೂ ಪ್ರಮುಖ ಪ್ರವಾಸಿ ತಾಣಗಳಾದ ಹಾಸನ, ಶ್ರವಣಬೆಳಗೊಳ, ಬೇಲೂರು, ಹಳೇಬೀಡು, ಮತ್ತು ಧಾರ್ಮಿಕ ಕೇಂದ್ರಗಳಾದ ಕುಕ್ಕೆಸುಬ್ರಮಣ್ಯ, ಧರ್ಮಸ್ಥಳಕ್ಕೆ ನೇರ ಸಂಪರ್ಕ ದೊರೆಯುತ್ತದೆ. ಅಲ್ಲದೇ ಬೃಹತ್ ಶೈಕ್ಷಣಿಕ ಮತ್ತು ಆಸ್ಪತ್ರೆ ಕೇಂದ್ರಗಳಾದ ಉಡುಪಿ, ಮಣಿಪಾಲ ಗಳ ನಡುವೆ ಸಂಪರ್ಕ ದೊರೆಯುತ್ತದೆ. ಬಂದರು ನಗರ ಮಂಗಳೂರಿಗೆ ಸಂಪರ್ಕ ದೊರೆಯುವುದರಿಂದ ಕರಾವಳಿ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಪ್ರವಾಸೋದ್ಯಮ ಮತ್ತು ಆರ್ಥಿಕ ಚಟುವಟಿಕೆಗಳ ಬೆಳವಣಿಗೆಗೆ ಅನುಕೂಲವಾಗುತ್ತದೆ.

ಈಗಾಗಲೆ ಅಮೃತ್ ಭಾರತ್ ಯೋಜನೆ ಅಡಿ ಹೊಸಪೇಟೆರೈಲ್ವೇನಿಲ್ದಾಣಅಭಿವೃದ್ಧಿಯಾಗುತ್ತಿದ್ದು, ಹೆಚ್ಚುವರಿಯಾಗಿ ಎರಡು ನೂತನ ಪ್ಲಾಟ್‌ಫಾರಂಗಳನ್ನು ನಿರ್ಮಿಸಬೇಕು. ಹೊಸಪೇಟೆಯಲ್ಲಿ ಪ್ಯಾಸಿಂಜರ್ ಕೋಚ್‌ಗಳ ನಿರ್ವಹಣೆ ಮತ್ತು ಇಲ್ಲಿಂದ ನೂತನ ಪ್ಯಾಸಿಂಜರ್ ರೈಲುಗಳ ಆರಂಭಕ್ಕೆ ಅನುಕೂಲವಾಗುವಂತೆ ಪಿಟ್‌ಲೈನ್ ವ್ಯವಸ್ತೆ, ಹಾಗೂ ಪ್ರಯಾಣಿಕರಿಗೆ ಅಗತ್ಯವಾದ ಮೂಲಸೌಕರ್ಯಗಳನ್ನು ಕಲ್ಪಿಸಬೇಕು.

ನಗರದ ಹೊರ ವಲಯದಲ್ಲಿರುವ ಚಿತ್ತವಾಡ್ಗಿ ಮತ್ತು ಮಾಗಾಣಿ ಪ್ರದೇಶಗಳಿಂದ ನಗರಕ್ಕೆ ಬರುವ ರೈತರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ವಿಳಂಬವಿಲ್ಲದೇ ಸುರಕ್ಷಿತವಾಗಿ ನಗರಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ರೈಲ್ವೇ ಎಲ್.ಸಿ.ಗೇಟ್ ನಂ.4, (ಐ.ಎಸ್.ಆರ್ ಸಕ್ಕರೆ ಕಾರ್ಖಾನೆ)ಗೆ ಮೇಲ್‌ಸೇತುವೆ ನಿರ್ಮಿಸಬೇಕೆಂದು ಆಗ್ರಹಿಸಿದರು. ಹಾಗೂ ಜಿಲ್ಲೆಯ ಪಶ್ಚಿಮ ತಾಲೂಕುಗಳಿಂದ ಬೆಂಗಳೂರಿಗೆ ಹೋಗಲು ಅನುಕೂಲವಾಗುವಂತೆ ಹೊಸಪೇಟೆ–ತುಮಕೂರು ನಡುವೆ ಡೆಮೋ ರೈಲು ಸಂಚಾರ ಆರಂಭಿಸಬೇಕೆಂದು ಆಗ್ರಹಿಸಿದರು.

ಮನವಿಗೆ ಪ್ರತಿಕ್ರಿಯಿಸಿದ ಪ್ರಧಾನ ವ್ಯವಸ್ಥಾಪಕರು ಪ್ರಸ್ತುತ ಹುಬ್ಬಳ್ಳಿ ಮಾರ್ಗವಾಗಿ ಸಂಚರಿಸುತ್ತಿರುವ ವಿಜಯಪುರ–ಮಂಗಳೂರು ಗಾಡಿ ಸಂಖ್ಯೆ : 07377/07378 ರೈಲನ್ನು ವಾರದಲ್ಲಿ 3 ದಿನ ಹೊಸಪೇಟೆ–ಕೊಟ್ಟೂರು ಮಾರ್ಗವಾಗಿ ಸಂಚರಿಸುವ ಬಗ್ಗೆ ಪರಿಶೀಲಿಸಲಾಗುವುದು. ಹಾಗೂ ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಕುಂಬಮೇಳದ ಮುಕ್ತಾಯದ ನಂತರ ರದ್ದಾಗಿರುವ ಬೆಳಗಾವಿ–ಹೈದರಾಬಾದ್–ಮಣಗೂರು ಗಾಡಿ ಸಂಖ್ಯೆ : 07335/07336 ಹಾಗೂ ಹುಬ್ಬಳ್ಳಿ–ತಿರುಪತಿ ಗಾಡಿ ಸಂಖ್ಯೆ : 57401/57402 ರೈಲುಗಳನ್ನು ಪುನರ್ ಆರಂಭಿಸಲಾಗುವುದು, ಹೊಸಪೇಟೆ ರೈಲು ನಿಲ್ದಾಣ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳಾದ ಸಂತೋಷ್ ಕುಮಾರ್ ಹೆಗಡೆ, ಸುನೀಲ್, ಪ್ರವೀಣ್ ಕುಮಾರ್, ಹಾಗೂ ಸ್ಥಳಿಯರಾದ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಅಶೋಕ್ ಜೀರೆ, ವೈ.ಯಮುನೇಶ್, ಮಹೇಶ್ ಕುಡುತಿನಿ, ಪ್ರೊ॥ ಉಮಾಮಹೇಶ್ವರ್, ಟಿ.ಆರ್.ತಿಪ್ಪೇಸ್ವಾಮಿ, ಡಿ.ರಾಮಕೃಷ್ಣ, ನಜೀರ್ ಸಾಬ್, ಕೆ.ಗೋಪಿನಾಥ್, ಜಿ.ದೇವರೆಡ್ಡಿ, ಜೆ. ವರುಣ್, ಇನ್ನುಮುಂತಾದವರು ಉಪಸ್ಥಿತರಿದ್ದರು.

# ಫಲಿತಾಂಶ ಸುಧಾರಣೆಗೆ ಒತ್ತು ನೀಡಿ

### ಕೊಪ್ಪಳ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ರತ್ನಂ ಪಾಂಡೇಯ ಹೇಳಿಕೆ





■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಮಕ್ಕಳ ಫಲಿತಾಂಶ ಸುಧಾರಣೆಗೆ ಒತ್ತು ನೀಡಿ ಎಂದು ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಹೇಳಿದರು.

ಗುರುವಾರ ಜಿಲ್ಲಾ ಪಂಚಾಯತ್ ಕಛೇರಿ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯ ಗುರುಗಳು ಹಾಗೂ ನೋಡಲ್ ಅಧಿಕಾರಿಗಳಿಗೆ ಕರೆದ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಫಲಿತಾಂಶ ಸುಧಾರಣೆ ಕುರಿತು ಪೂರ್ವಬಾವಿ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು. ಕಳೆದ ಬಾರಿಗಿಂತ ಈ ಸಲ ಫಲಿತಾಂಶ ನಮ್ಮ ಜಿಲ್ಲೆಯದ್ದು ಹೆಚ್ಚಾಗಬೇಕು. ಈಡಿ ರಾಜ್ಯದಲ್ಲಿ ಹೆಚ್ಚಾಗದಿದ್ದರೂ ಕಲ್ಯಾಣ ಕರ್ನಾಟಕ ಭಾಗದಲ್ಲಾದರೂ ಪ್ರಥಮ ಸ್ಥಾನ ಬರಬೇಕು. ವಾರ್ಷಿಕ ಪರೀಕ್ಷೆಗಳಿಗೆ ಇನ್ನೂ ಒಂದುವರೆ ತಿಂಗಳು ಮಾತ್ರ ಬಾಕಿಯಿದ್ದು, ಕಲಿಕೆಯಲ್ಲಿ ಹಿಂದುಳಿದ ಸಿ ಮತ್ತು ಡಿ ಕೆಟಗರಿ ಮಕ್ಕಳ ಕಲಿಕೆಗೆ ವಿಶೇಷ ಒತ್ತು ನೀಡಿ. ಮಕ್ಕಳ ಹಾಜರಾತಿ ಕಡಿಮೆ ಇದ್ದಲ್ಲಿ ಪಾಲಕರ ಸಭೆ ನಡೆಸಿ, ಅವರಿಗೆ ಮಾಹಿತಿ ನೀಡಿ. ಮಕ್ಕಳ ಕಲಿಕೆಯ ರಿವಿಜನ್ ಮಾಡುವಾಗ ಅವರಿಗೆ ಸುಲಭವಾಗಿ ತಿಳಿಯುವ ಹಾಗೆ ಹೇಳಿ. ಮತ್ತೆ ಈ ಸಭೆಯನ್ನು ಫೆಬ್ರವರಿ ಮೊದಲ ವಾರದಲ್ಲಿ ನಡೆಸಲಾಗುವುದು.

ಎ, ಬಿ, ಸಿ & ಡಿ ಎಂದು ನಾಲ್ಕು ಕೆಟಗರಿಗಳನ್ನು ಮಾಡಿದ್ದು, ಮೊದಲ ಒಂದು ಮತ್ತು ಎರಡನೇ ಕೆಟಗರಿಯ ಮಕ್ಕಳು ಪಾಸಾಗುತ್ತಾರೆ. ಆದರೆ, ಸಿ & ಡಿ ಮಕ್ಕಳ ಫಲಿತಾಂಶ ಕಡಿಮೆಯಾಗಿರುತ್ತದೆ. ಮಕ್ಕಳಿಗೆ ವಿಷಯವಾರು ದಿನಕ್ಕೆ ಒಂದೊಂದು ಪ್ರಶ್ನೆಗಳನ್ನು ನೀಡಿ, ವಾರಕ್ಕೆ ಮೂವತ್ತು ಪ್ರಶ್ನೆಗಳಾಗುತ್ತವೆ. ಅವುಗಳ ಫಲಿತಾಂಶವನ್ನು ಪರಿಶೀಲನೆ ಮಾಡಬೇಕು. ವಿದ್ಯಾರ್ಥಿಗಳ ಶಾಲಾ ಹಾಜರಾತಿ ಹೆಚ್ಚಳಕ್ಕಾಗಿ ಶಿಕ್ಷಕರು ಮನೆ ಭೇಟಿ ನೀಡಿ ಮಕ್ಕಳ ಹಾಜರಾತಿ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.

ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಬೆಳಿಗ್ಗೆ ಹಾಗೂ ಸಂಜೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವ ಮೂಲಕ ಮಕ್ಕಳ ಫಲಿತಾಂಶ ಹೆಚ್ಚಳಕ್ಕೆ ಒತ್ತು ನೀಡಬೇಕು. ಈಗಾಗಲೇ ನೇಮಕ ಮಾಡಿದ ನೋಡಲ್ ಅಧಿಕಾರಿಗಳು ತಮಗೆ ವಹಿಸಲಾದ ಶಾಲೆಗಳಿಗೆ ಭೇಟಿ ನೀಡಿ, ಮಕ್ಕಳ ಕಲಿಕಾ ಕಾರ್ಯದ ಬಗ್ಗೆ ಪರಿಶೀಲನೆ ನಡೆಸಬೇಕು. ಪ್ರಶ್ನೆ ಪತ್ರಿಕೆಗಳನ್ನು ವಿಷಯವಾರು ಜಿಲ್ಲೆಯಲ್ಲಿ ಎಲ್ಲಾ ಕಡೆ ಒಂದೇ ರೀತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಜೂನ್ ನಿಂದ ಇಲ್ಲಿಯವರೆಗೆ ಒಟ್ಟು 9 ಸಭೆಗಳು ನಡೆದಿದ್ದು, ಅವುಗಳ ಪ್ರಗತಿಯ ಮಾಹಿತಿಯನ್ನು ನೀಡುವಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಭೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎಸ್.ಎಸ್.ಬಿರಾದಾರ, ಪದವಿ ಪೂರ್ವ ಶಿಕ್ಷಣ ಇಲಾಖೆ ಜಗದೀಶ್ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿವಿಧ ಶಾಲಾ ಕಾಲೇಜುಗಳ ಮುಖ್ಯ ಗುರುಗಳು, ನೋಡಲ್ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಅನಾಮದೇಯ ಶಿಶು ಪತ್ತೆ

■ **ಹಂಪಿ ಟೈಮ್ಸ್ ಹೊಸಪೇಟೆ:**

ಮೂರು ದಿನದ ಹಸೂಗೂಸು ಅನಾಮಧೇಯ ಶಿಶು ಪತ್ತೆಯಾಗಿರುವ ಹಿನ್ನಲೆಯಲ್ಲಿ ಪಾಲಕರ ಪತ್ತೆಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುದೀಪ್ ಉಂಕಿ ತಿಳಿಸಿದ್ದಾರೆ. ಕೂಡ್ಲಿಗಿ ತಾಲೂಕು ಅಲೂರು ವಡ್ಡರಹಟ್ಟಿ ಗ್ರಾಮದ ಕೃಷ್ಣರೆಡ್ಡಿ ತೋಟದ ಹತ್ತಿರ ಡಿ.10 ರಂದು ಮಧ್ಯಾಹ್ನ 2 ಗಂಟೆ ವೇಳೆಯಲ್ಲಿ ಶಿಶುವನ್ನು ಯಾರೋ ಬಿಟ್ಟು ಹೋಗಿದ್ದು, ಮಗುವನ್ನು ಅಲೂರು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಸ್ವೀಕರಿಸಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮುಖಾಂತರ ಮಕ್ಕಳ ಕಲ್ಯಾಣ ಸಮಿತಿಯ ಅದೇಶದನ್ವಯ ವಿಜಯನಗರದ ಸರ್ಕಾರಿ ವಿಶೇಷ ದತ್ತು ಸಂಸ್ಥೆಗೆ ಪಾಲನೆ ಪೋಷಣೆಗಾಗಿ ದಾಖಲು ಮಾಡಿಕೊಳ್ಳಲಾಗಿದೆ. ಮಗುವಿನ ಪೋಷಕರ ಬಗ್ಗೆ ಮಾಹಿತಿ ಸಿಕ್ಕಲ್ಲಿ, 08394–200091 ಕರೆ ಮಾಡಿ ತಿಳಿಸಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುದೀಪ್‌ಕುಮಾರ ಉಂಕಿ ಕೋರಿದ್ದಾರೆ.

# ಸರ್ಕಾರಿ ಶಾಲೆಯ ಶಿಕ್ಷಣ ಆಯ್ಕೆಯಾಗಲಿ

**ಮೊದಲ ಪುಟದಿಂದ**

ತಿಂಗಳಿಗೊಮ್ಮೆ ಕಡ್ಡಾಯವಾಗಿ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು. ಮಕ್ಕಳ ರಕ್ಷಣೆ, ಹಕ್ಕುಗಳ ಬಗ್ಗೆ ಚರ್ಚಿಸುವುದರೊಂದಿಗೆ ಅರಿವು ಮೂಡಿಸುವ ಕೆಲಸ ಮಾಡಬೇಕು. ಪ್ರತಿ ಶಾಲೆಯಲ್ಲೂ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಗೋಡೆ ಬರಹದಲ್ಲಿ ಬರೆಯಬೇಕು ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ಮಾತನಾಡಿ, ಮಕ್ಕಳು ಸಂವಿಧಾನಾತ್ಮಕವಾಗಿರುವ ಹಕ್ಕುಗಳನ್ನು ಪಡೆದುಕೊಳ್ಳಬೇಕು. ಜೀವನಾಧಾರಿತ ಮೌಲ್ಯ ಶಿಕ್ಷಣ ಹೊಂದುವ ಮೂಲಕ ಸಮಾಜದಲ್ಲಿ ಜವಾಬ್ದಾರಿಯುತ ನಾಗರಿಕರಾಗಬೇಕು ಎಂದು ಹೇಳಿದರು.

ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮೀ ಮೈದೂರು ಅವರು ಮಾತನಾಡಿ, ಮಕ್ಕಳು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಸದಸ್ಯರಾದ ಹೆಚ್.ಸಿ.ರಾಘವೇಂದ್ರ ಭಟ್ ಅವರು ಮಕ್ಕಳೊಂದಿಗೆ ಸಂವಾದ ನಡೆಸಿದರು.

**ಸಂವಾದ:** ಕುರುಗೋಡು ತಾಲ್ಲೂಕಿನ ಸೋಮಸಮುದ್ರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ ವರಲಕ್ಷ್ಮಿ ಮಾತನಾಡಿ, ಗ್ರಾಮದಲ್ಲಿ ಶಾಲೆಯ ಕಟ್ಟಡ ಅವಶ್ಯವಿದೆ ಎಂದು ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದಲಿಂಗಮೂರ್ತಿ ಅವರು, ಈಗಾಗಲೇ ಶಾಲೆಯು ಉನ್ನತೀಕರಿಸಿದ ಶಾಲೆಯಾಗಿದ್ದು, ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ನೂತನ ಕಟ್ಟಡ ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ ಎಂದರು.

ದೇವಲಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಶಶಿಕಲಾ ಮಾತನಾಡಿ, ಗ್ರಾಮದಲ್ಲಿ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿದ್ದು, ಸುಧಾರಣೆಯಾಗುತ್ತಿಲ್ಲ ಎಂದು ಪ್ರಶ್ನಿಸಿದರು. ಈ ಕುರಿತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ ಅವರು ಪ್ರತಿಕ್ರಿಯಿಸಿ, ಬಾಲ್ಯವಿವಾಹ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ ಸಹಾಯವಾಣಿ ಸಂಖ್ಯೆ 1098 ಕರೆ ಮಾಡಿ ಮಾಹಿತಿ ನೀಡಬೇಕು. ಬಾಲ್ಯವಿವಾಹ ದುಷ್ಪರಿಣಾಮ ಕುರಿತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಹೆಚ್ಚು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ಮತ್ತೋರ್ವ ವಿದ್ಯಾರ್ಥಿನಿ ಸಂಗೀತಾ.ಯು ಮಾತನಾಡಿ, ನಮ್ಮದು ಉಳೂರು ಗ್ರಾಮವಾಗಿದ್ದು, ಪ್ರೌಢ ವಿದ್ಯಾಭ್ಯಾಸಕ್ಕೆ ತಾಳೂರು ಗ್ರಾಮಕ್ಕೆ ಬರಬೇಕು. ಆದರೆ, ಬಸ್ ಕೊರತೆ ಇದ್ದು, ಒಮ್ಮೊಮ್ಮೆ ನಡೆದುಕೊಂಡೇ ಹೋಗಿಬರಬೇಕು. ಸಂಜೆ ಸಮಯದಲ್ಲಿ ಕಷ್ಟಕರವಾಗುತ್ತದೆ ಎಂದು ಸಭೆಗೆ ತಿಳಿಸಿದರು. ಸದಸ್ಯರಾದ ಶಶಿಧರ ಕೋಸಂಬೆ ಅವರು ಪ್ರತಿಕ್ರಿಯಿಸಿ, ಈ ಕುರಿತು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಪತ್ರ ವ್ಯವಹಾರ ನಡೆಸಬೇಕು ಎಂದು ಬಿಇಒಗಳಿಗೆ ನಿರ್ದೇಶನ ನೀಡಿದರು.

ಎಎಸ್ಪಿ ನವೀನ್ ಕುಮಾರ್, ಜಿಲ್ಲಾ ಕಾರ್ಮಿಕ ಅಧಿಕಾರಿ ಸಿದ್ದಪ್ಪ ಖೈನೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಜಲಾಲಪ್ಪ.ಎ.ಕೆ., ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದಲಿಂಗಮೂರ್ತಿ, ವಿವಿಧ ಶಾಲೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿದ್ದರು.

# ಜ.3 ಅಸ್ಪೃಶ್ಯತಾ ನಿವಾರಣಾ ಜಾಗೃತಿ

■ **ಹಂಪಿ ಟೈಮ್ಸ್ ಹೊಸಪೇಟೆ**

: 2024–25 ನೇ ಸಾಲಿನ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ನಿಮಿತ್ತ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹೊಸಪೇಟೆ ತಾಲೂಕಿನ ವಿವಿಧೆಡೆ ಬೀದಿ ನಾಟಕಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಶಾಕಿ ಅಹ್ಮದ್ ತಿಳಿಸಿದ್ದಾರೆ.

ಕೋಗಳಿಯ ರಂಗಲೋಕ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಜ.3 ರಂದು ಡಣಾನಾಯಕನಕೆರೆ, ಡಣಾಪುರ, ತಿಮ್ಮಲಾಪುರ ಜ.4 ರಂದು ಕಲ್ಲಹಳ್ಳಿ, ಬೈಲುವದ್ದಿಗೇರಿ, ಭುವನಹಳ್ಳಿ, ಜ.6 ರಂದು ಪಾಪಿನಾಯಕನಹಳ್ಳಿ, ಹಂಪಿ, ಮಲಪನಗುಡಿ, ನಾಗೇನಹಳ್ಳಿ ಗ್ರಾಮಗಳಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಬೀದಿನಾಟಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಕಾರ್ಯಕ್ರಮದಲ್ಲಿ ತಹಶೀಲ್ದಾರರು, ತಾಪಂ ಇಒ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳು ಸೇರಿದಂತೆ ಜನಪ್ರತಿನಿಧಿಗಳು, ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ತಿಳಿಸಿದ್ದಾರೆ.

# ನೇಕಾರರ ಸಂಘದ ಅಧ್ಯಕ್ಷರಾಗಿ ಬಾವಿಕಟ್ಟಿ ಶಿವಾನಂದ ಆಯ್ಕೆ

■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ನೇಕಾರರ ಸಹಕಾರ ಉತ್ಪತ್ತಿ ಮತ್ತು ಮಾರಾಟ ಸಂಘಕ್ಕೆ ಐದು ವರ್ಷದ ಅವಧಿಗೆ ಆಡಳಿತ ಮಂಡಳಿ ಗುರುವಾರ ಅಧಿಕಾರಕ್ಕೆ ಬಂದಿತು. ಆಡಳಿತ ಮಂಡಳಿ ನೂತನ ಆಧ್ಯಕ್ಷರಾಗಿ ವಕೀಲ ಬಾವಿಕಟ್ಟಿ ಶಿವಾನಂದ ಅಧ್ಯಕ್ಷರಾಗಿದ್ದು, ಉಪಾಧ್ಯಕ್ಷರಾಗಿ ತೋಟದ ಹನುಮಂತಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ರಾಂಪುರ ಬಸವರಾಜ್, ಗಂಜಿ ದಿನೇಶ, ಪಟ್ಟಶಾಲಿ ನಿಂಗರಾಜ್, ಕಾಸಲ ಕೊಟ್ರೇಶ, ದೇವರೆಡ್ಡಿ ವೆಂಕಟೇಶ, ತೂಲಹಳ್ಳಿ ಬೊಮ್ಮಪ್ಪ, ವಿ.ಎಸ್. ಕೊಟ್ರೇಶ, ಎ. ಶಿವರಾಜ್, ಬಿ.ಸುನಂದಾ, ಪದ್ಮಾವತಿ ಅವಿರೋಧವಾಗಿ ಆಯ್ಕೆಯಾಗಿರುವುದನ್ನು ಚುನಾವಣಾಧಿಕಾರಿ ಎಚ್. ಸುರೇಶ ಘೋಷಿಸಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಎಂ.ಎಂ.ಜೆ. ಹರ್ಷವರ್ಧನ, ಬಾಚಿನಳ್ಳಿ ಗುರುಬಸವರಾಜ್, ಭಾವಿಕಟ್ಟಿ ಗುರುಬಸಪ್ಪ, ಬಾರಿಕರ ಮರಿಗೋಣಪ್ಪ, ಜವಳಿ ರಾಜಣ್ಣ, ಬೂದಿ ಶಿವಕುಮಾರ್, ಲಾರಿ ಗುರುಬಸವರಾಜ್ ಹಾಗೂ ಸಂಘದ ಕಾರ್ಯದರ್ಶಿ ಹರೀಶ ಮುಂತಾದವರಿದ್ದರು.